ಕರ್ನಾಟಕ ಸಾಹಿತ್ಯ ಅಕಾಡೆಮಿ

# ಕವಿತೆ 2012–13

ಎನ್.ಸಿ.ಮಹೇಶ್



# ಕವಿತೆ

# 2012–2013

## (ಸಂಯುಕ್ತ ಸಂಚಿಕೆ)

ಸಂಪಾದಕರು

ಎನ್.ಸಿ. ಮಹೇಶ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.
ದೂರವಾಣಿ:080–22211730/22106460
www.karnatakasahithyaacademy.org
Email: sahithya.academy@gmail.com

**KAVITHE 2012-2013**
**(Combined Edition)**
**Edited by: N.C. Mahesh**

Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ



| | | |
|---|---|---|
| ಪುಟಗಳು | : | x+೮೮ |
| ಬೆಲೆ | : | ₹ ೧೦೦/- |
| ಮರುಮುದ್ರಣ | : | ೨೦೧೬ |
| ಪ್ರತಿಗಳು | : | ೫೦೦ |
| ಮುಖಪುಟ ವಿನ್ಯಾಸ | : | ತಿರುಣಾವುಕರಸು ಎಸ್. |
| Pages | : | x+88 |
| Price | : | ₹ 100/- |
| Reprint | : | 2016 |
| Copies | : | 500 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು–560 059.
080– 28483133 / 28484518

# ಅಧ್ಯಕ್ಷರ ನುಡಿ

2012 ಮತ್ತು 2013 ಈ ಎರಡೂ ವರ್ಷಗಳ ಕಾಲಾವಧಿಯಲ್ಲಿ ಪ್ರಕಟವಾದ ಕವಿತೆಗಳಲ್ಲಿ ನಾವು ಕೊಟ್ಟ ಕಡಿಮೆ ಅವಧಿಯಲ್ಲಿ ಉತ್ತಮವಾದ ಕವಿತೆಗಳನ್ನು ಆರಿಸಿ ಸಂಪಾದಿಸಿಕೊಟ್ಟ ಶ್ರೀ ಎನ್.ಸಿ. ಮಹೇಶ್ ಅವರಿಗೆ ಕೃತಜ್ಞತೆಗಳು. ಈ ಕೆಲಸ ನಮ್ಮ ಅವಧಿಯದಲ್ಲದಿದ್ದರೂ ನಿರ್ವಹಿಸಲೇಬೇಕಾದಾಗ ಸಂಪಾದಕರಿಗೆ ಹಿಂದಿನ ವರ್ಷಗಳ ಪತ್ರಿಕೆಗಳನ್ನು ಹುಡುಕುವ ಕಷ್ಟವನ್ನು ಕೊಟ್ಟಿದ್ದಕ್ಕೆ ಕ್ಷಮೆ ಕೇಳುತ್ತೇನೆ. ಸಂಪಾದಕರು ತಮ್ಮ ಕಾವ್ಯ ಸೂತ್ರದಂತೆ "ಕವಿತೆಗಳ ಓದುವಿಕೆ ರಕ್ತವನ್ನು ಮುಟ್ಟುವಂತಿರಬೇಕು" ಎನ್ನುವಂಥ ಕವಿತೆಗಳ ಚಯನವು ಇಲ್ಲಿ ಆಗಿದೆ. ಆದರೆ ಹೊಸ ಕವಿಗಳ ಕವಿತೆಗಳು ಬಹಳ ಕಡಿಮೆ ಪ್ರಮಾಣದಲ್ಲಿವೆ. ಶ್ರೀ ಮಹೇಶ್ ಅವರು ಕನ್ನಡದಲ್ಲಿದ್ದ ಇನ್ನೂ ಹಲವಾರು ಪತ್ರಿಕೆಗಳಲ್ಲಿ ಇಣುಕಿದ್ದರೆ ಬೇರೆ ಕವಿಗಳು ಸಿಗಬಹುದಿತ್ತೆಂದು ಅನ್ನಿಸುವುದಕ್ಕೆ ಕಾರಣ ಎರಡೂ ವರ್ಷಗಳಲ್ಲಿ ಆಯ್ಕೆಯಾದ ಹಳೆಯ ಕವಿಗಳ ಸಂಖ್ಯೆ. ಏನಿದ್ದರೂ ಇಲ್ಲಿನ ಕವಿತೆಗಳ ಆಯ್ಕೆ ಉತ್ತಮವಾಗಿದೆ ಹಾಗೂ ಸೂಕ್ತ ಸಂಪಾದಕೀಯವನ್ನೂ ಬರೆದಿದ್ದಾರೆ. ಇದಕ್ಕೆಲ್ಲ ಅಕಾಡೆಮಿ ಅವರಿಗೆ ಕೃತಜ್ಞತೆ ಸಲ್ಲಿಸುತ್ತದೆ

ಈ ಪುಸ್ತಕವನ್ನು ಹೊರತರಲು ಸಹಕರಿಸಿ ಶ್ರಮಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀಮತಿ ಸಿ.ಎಚ್. ಭಾಗ್ಯ ಮತ್ತು ಶ್ರೀ ಹರೀಶ್ ಹಾಗೂ ಸಿಬ್ಬಂದಿ ವರ್ಗ ಮತ್ತು ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯಬಯಸುತ್ತೇನೆ.

ಮಾಲತಿ ಪಟ್ಟಣಶೆಟ್ಟಿ
ಅಧ್ಯಕ್ಷರು

# ಸಂಪಾದಕರ ಮಾತು

ಕವಿಯಾಗಿ ರೂಪುತಳೆಯುವುದು ವಿಸ್ಮಯ ಹಾಗೂ ಅಪಾಯ; ಇದು ನನ್ನ ದರ್ಶನ ಹಾಗು ಅನುಭವ. ಈ ಬದುಕಿನ ಆಗುಹೋಗುಗಳಿಗೆ ತಮ್ಮ ಮನಸ್ಸನ್ನು ತೀವ್ರವಾಗಿ ತೆತ್ತುಕೊಳ್ಳುವ ಉತ್ಕಟ ಭಾವಜೀವಿಗಳ ಒಳಗೆ ಕವಿತೆಗಳಾಗಬಹುದಾದ ಸಾಲುಗಳು ಸದಾ ಸುಳಿ ತಿರುಗುತ್ತಿರುತ್ತವೆ. ಇವು ಕೇಳುಗರ ಕಿವಿಗಳಿಗೆ ಕೇಳಿಸುವ ಪೂರ್ವದಲ್ಲಿ ಕವಿಯ ಮನದ ಮಂಥನದಲ್ಲಿ ಸಾಕಷ್ಟು ತಾಲೀಮಿಗೆ ಒಳಗಾಗಿ ಒಂದು ಹದಕ್ಕೆ ಬಂದಂತವು. ಸಾಹಿತ್ಯದ ಬೇರೆ ಪ್ರಕಾರಗಳೂ ಕವಿತೆಗಳ ಬಿಗಿ ಬಂಧ ರೂಢಿಸಿಕೊಳ್ಳಲು ಬಯಸುತ್ತವೆ, ತುಡಿಯುತ್ತವೆ. ಹಾಗಾಗಿ ಕವಿತೆಗಳು ಅನ್ನುವುದು ಮೊದಲಿಗೆ ಹೊರಗಿನ ಗದ್ದಲಕ್ಕೆ ಕಿವುಡಾಗಿ ಒಳಗೆ ಗದ್ದಲವೆಬ್ಬಿಸಿಕೊಂಡೂ ನಿಶ್ಶಬ್ದದಲ್ಲೇ ಕಡಲಿನಂತೆ ಸದಾ ತೊನೆಯುತ್ತ ಕಟ್ಟುವ ಬಂಧದಂಥದ್ದು.

ಸದಾ ಹಲವು ಮಿಶ್ರಿತ ಭಾವಗಳೊಂದಿಗೆ ಸಂವೇದಿಸುವ ಕವಿ, ಈ ಸ್ಪಂದನೆಯ ಹಂತದಲ್ಲೇ ಉಳಿದರೆ ತಪ್ಪಲ್ಲ; ಆಯಾ ಹೊತ್ತಿನ ಕ್ಷಣಗಳ ಗುಂಗಿನಲ್ಲಿ ತನ್ನ ಸಾಲುಗಳಿಗೆ ಕುಸುರಿ ಕೆಲಸ ಮಾಡುತ್ತ ಕಾಲ ಕಳೆಯುವುದು ವಿಸ್ಮಯ; ಈ ಪರಿಧಿಯಲ್ಲೇ ನಿಸ್ಪೃಹವಾಗಿ ಕಡೇವರೆಗೂ ಉಳಿದುಬಿಟ್ಟರೆ ಅದು ಮತ್ತೂ ವಿಸ್ಮಯ.

ಆದರೆ ಕವಿತೆಗಳ ಕಲೆಗಾರಿಕೆಯ ಅವಸಾನ ಹಾಗು ಅಪಾಯವು ಕೇಳುಗರ ಕಿವಿಗಳು ಹಾಗು ಅವರ ಬಾಯಿಗಳು ಹೊರಡಿಸುವ ಹೊಗಳಿಕೆಯ ಶಬ್ದ ಜಾಲದಿಂದ ಕವಿಯಲ್ಲಿ ಪುಟಿದೇಳುವ ಮೋಹದಲ್ಲಿ ಅಡಕಗೊಂಡಿವೆ. ಈ ತರಂಗಗಳು ಹೆಚ್ಚು ಕಲಕಲು ಆರಂಭಿಸಿದಂತೆ ಕವಿ ತನ್ನ ಸ್ಪಂದನೆಯನ್ನು ಪ್ರಯತ್ನಪೂರ್ವಕವಾಗಿ ಹೆಚ್ಚುಗೊಳಿಸಿಕೊಳ್ಳಲು ಆರಂಭಿಸುತ್ತಾನೆ. ಕಾಲದ ವ್ಯವಧಾನದ ಜೊತೆಗೆ ಹಠಕ್ಕೆ ಬಿದ್ದವನಂತೆ ತನ್ನ ಮನಸ್ಸನ್ನು ಕವಿತೆಗಳ ಚೀಲ ಮಾಡಿಕೊಳ್ಳಲು ಆರಂಭಿಸಿ ಕಂಡಕಂಡದ್ದಕ್ಕೆ ತನ್ನ ಮನಸ್ಸನ್ನು ಕಿತ್ತು ಅಂಟಿಸುವ ಕೆಲಸದ ಖಯಾಲಿಗೆ ಬೀಳುತ್ತಾನೆ.

ನಿಜದ ತೀವ್ರತೆ, ಭಾವ ಮುಕ್ಕಾಗುವುದು ಇಲ್ಲಿಯೆ; ಸಾಲುಗಳ ವಿನ್ಯಾಸ ಬದಲಿಸಿದರೆ ಕವಿತೆಗಳಾಗುತ್ತವೆ ಎಂದು ಅನಿಸುವುದು ಇಲ್ಲಿಂದಲೇ.

ಜೊತೆಗೆ ಈ ಜಗದ ವಹಿವಾಟು ಹಾಗೂ ನೋಟಕ್ರಮಗಳಿಗೆ ಪದಗಳನ್ನು ಹೊಂದಿಸುತ್ತ, ಅವುಗಳಿಗೆ ಕಾವ್ಯಾತ್ಮಕ ನಶೆ ಏರಿಸುವಂತೆ ತಿದ್ದುವುದೇ ಕವಿತೆ ಎಂದು ಕೆಲವರು ಭ್ರಮಿಸಿ ಬರೆಯುವುದನ್ನು ರೂಢಿಸಿಕೊಂಡಿದ್ದಾರೆ. ನಿರೂಪಣೆಯ ನಡುವೆ

ಒಂದು ಚಿತ್ರವತ್ತಾದ ರೂಪಕ ತರಬೇಕು ಎನ್ನುವುದು ಕಾವ್ಯದ ತುರ್ತು ಎಂಬುದಕ್ಕೆ ಕವಿಗೊಡುವಷ್ಟು ವ್ಯವಧಾನ ಮಾಯಾವಾಗಿರುವ ಕಾರಣ ಸಾಲುಗಳು ಪತ್ರಿಕೆಗಳಲ್ಲಿ ಹರಿಯಲಾರಂಭಿಸಿವೆ.

ಕವಿತೆಗಳ ಓದು ರಕ್ತವನ್ನು ಮುಟ್ಟಿದಂತೆ ಇರಬೇಕು ಎಂದುಕೊಂಡಿರುವ ನನಗೆ ಇಂಥ ಕೆಲವು ಪದ್ಯಗಳನ್ನಾದರು ಈ ಹಿಂದೆ ಓದಿರುವ ಖುಷಿಯಿದೆ; ವಿಸ್ಮಯವೂ ಇದೆ. ಮತ್ತೂ ಕೆಲವೊಮ್ಮೆ ಅಥವಾ ಬಹಳ ಸಲ ಮೇಲಿನ ನನ್ನ ವಿವರಣೆಗಳಂತೆ ಪತ್ರಿಕೆಗಳ ತುರ್ತಿನಿಂದ ಕವಿತೆಗಳು ಎನ್ನುವ ಹಣೆಪಟ್ಟಿ ಅಂಟಿಸಿಕೊಂಡವು ತಮ್ಮ ಮುಖಗಳನ್ನು ಇಣುಕಿಸಿವೆ. ಇಂಥ ಸಾಲುಗಳನ್ನು ಕಣ್ಣುಗಳು ಬೆನ್ನುಹತ್ತುವಾಗ ಆರಂಭದಲ್ಲೇ ಅವುಗಳ ತಾಂತ್ರಿಕ ಕಸರತ್ತು ಅರಿವಿಗೆ ಬಂದು ನಿಲ್ಲಿಸಿದ ಸಂದರ್ಭಗಳೇ ಹೆಚ್ಚು.

ಈ ಬಗೆಯ ನಿಬಂಧನೆಗಳನ್ನು ಹೇರಿಕೊಂಡು ಕವಿತೆಗಳನ್ನು ಓದುವ ಕ್ರಮ ರೂಢಿಸಿಕೊಂಡಿರುವ ನನಗೆ ಕರ್ನಾಟಕ ಸಾಹಿತ್ಯ ಅಕಾಡಮಿಯು 2012 ಹಾಗು 2013 ನೇ ಸಾಲಿನಲ್ಲಿ ಹಲವು ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಕವಿತೆಗಳನ್ನು ಸಂಗ್ರಹಿಸಿಕೊಡುವ ಕೆಲಸಕ್ಕೆ ಹಚ್ಚಿತು.

ಈ ನಿಟ್ಟಿನಲ್ಲಿ ವರ್ಷಗಳ ಗಡಿಗಳೊಳಗೆ ಕವಿತೆಗಳನ್ನು ತಡಕಾಡ ಬಯಸಿದ ನನ್ನ ಕಣ್ಣುಗಳು ಆಯ್ಕೆಯ ಮಾನದಂಡದಲ್ಲಿ ಇರಿಸಿಕೊಂಡಿದ್ದು 'ಕವಿತೆಗಳ ಓದುವಿಕೆ ರಕ್ತವನ್ನು ಮುಟ್ಟಿದಂತಿರಬೇಕು' ಎನ್ನುವ ನನ್ನ ಹಳೆಯ ಸೂತ್ರವನ್ನೇ. ವೈಯಕ್ತಿಕವಾಗಿ ಈ ಅಕಾಡಮಿಗಳ ತಾಂತ್ರಿಕ ತುರ್ತುಗಳು ಮತ್ತು ಅವುಗಳ ರೂಪುರೇಷೆಗಳನುಸಾರ ಕೆಲಸಕ್ಕೆ ಮನಸ್ಸನ್ನು ಅಣಿಮಾಡಿಕೊಳ್ಳುವುದು ಕಷ್ಟದ ಕೆಲಸ ಎನ್ನುವುದು ಗೊತ್ತಿದ್ದರೂ ಈ ಕೆಲಸಕ್ಕೆ ನನ್ನ ಒಪ್ಪಿಗೆ ಅದು ಹೇಗೆ ಹೊರಟಿತು ಎನ್ನುವುದು ಇಂದಿಗೂ ವಿಸ್ಮಯವಾಗಿದೆ. ಮನಸ್ಸು, ಅದರ ಕಲ್ಪನಾ ಜಗತ್ತು, ಅವುಗಳ ಸ್ಪಂದನೆಗೆ ಕಾಲ ದೇಶಗಳ ಹಂಗಿಲ್ಲದಿದ್ದರೂ ಅವುಗಳಿಗೆ ಕಾಲದ ಪರಿಮಿತಿ ಕಟ್ಟಿ, ಇಂತಿಷ್ಟೇ ಪದ್ಯಗಳನ್ನು ಸಂಗ್ರಹಿಸಬೇಕು ಎಂಬ ಸೂಚನೆಗಳನ್ನೂ ಅಕಾಡಮಿ ಹೊರಡಿಸಿತು. ಈ ಸಂಖ್ಯೆಗಳ ಬಗ್ಗೆ ನನಗೆ ಎಂದಿಗೂ ಸಹಮತವಿಲ್ಲ. ನನ್ನ ಭಾವಲೋಕವನ್ನು ಹಿಡಿದು ಅಲುಗಿಸುವ ಸಾಲುಗಳಿರುವ ಪದ್ಯಗಳನ್ನು ತೀರ ಕಡಿಮೆ ಸಂಖ್ಯೆಗಳಲ್ಲಿ ನೀಡಿದರೆ ಅಕಾಡಮಿ ತನ್ನ ಕಾರ್ಯಪ್ರಗತಿಯ ತುರ್ತಿನ ಬಗ್ಗೆ ಮಾತಿಗೆ ನಿಲ್ಲಬಹುದು ಎನ್ನುವುದೂ ನೆನಪಿಗೆ ಬಂದಿತು. ಗುರು ಕಿರಂರಂತೆ ಕವಿತೆಗಳನ್ನು ಹೆಕ್ಕಿ ಓದುವ ಮಂದಿ ಇದಿದ್ದಾದರೆ ಅಂಥವರಿಗೆ ಸಂಗ್ರಹ ಕಾರ್ಯ ಒಂದು 'ಕಸರತ್ತು' ಅನಿಸುವುದರಲ್ಲಿ ಅನುಮಾನವಿಲ್ಲ. ಈ ಸೂಕ್ಷ್ಮಗಳು ಅರ್ಥವಾದರೆ ಅಕಾಡಮಿಗಳು ತಮ್ಮ ಕಾರ್ಯನಿರ್ವಹಣೆಯ ಕಾರ್ಯವೈಖರಿಯನ್ನು ಬದಲಿಸಿಕೊಂಡಾವು.

ನನ್ನ ಈ ಹುಡುಕಾಟದ ಕಾರ್ಯದಲ್ಲಿ ಹಲವು ತೊಡರುಗಳೂ, ಜಿಜ್ಞಾಸೆಗಳೂ ಎದುರಾದವು. ಬಹುತೇಕ ಸಂಗ್ರಹಗಳಲ್ಲಿ ಸ್ಥಾನ ಪಡೆದಿರುವ ಕವಿಗಳನ್ನು ಹೊರತುಪಡಿಸಿ ಹೊಸ ಹೆಸರುಗಳನ್ನು ಈ ಗಡಿಗಳ ಒಳಗೆ ಹುಡುಕಬೇಕು ಎನ್ನುವುದು ನನ್ನ ಇರಾದೆಯಾಗಿತ್ತು. ಈ ನಿಟ್ಟಿನಲ್ಲಿ ಓದುವಿಕೆ ಆರಂಭಿಸಿದ ನನಗೆ ನಿರಾಸೆಯಾಗುತ್ತಲೇ ಬಂದು ಕಡೆಗೆ ಅವೇ ಸ್ಥಾಪಿತ ಹೆಸರುಗಳು ನನ್ನ ಕಣ್ಣುಗಳು ತಿರುಗಿಸಿದ ಮನಸ್ಸಿನ ಜರಡಿಯಲ್ಲಿ ಉಳಿದುಕೊಂಡವು. ಇವುಗಳನ್ನು ಉಳಿಸಿಕೊಳ್ಳದೆ ನಿರ್ವಾಹವಿರಲಿಲ್ಲ, ಕೆಲವು ಚಿತ್ರಕಶಕ್ತಿಯಿಂದ ಗಮನ ಸೆಳೆದರೆ ಮತ್ತೆ ಕೆಲವು ತಮ್ಮ ತಾತ್ವಿಕತೆಗಳಿಂದ ಗಮನ ಸೆಳೆದವು. ಈ ಎಲ್ಲದರ ನಡುವೆ ಹೊಸ ಮುಖಗಳು ಹೊರಡಿಸಿದ ರಚನೆಗಳಲ್ಲಿ ಕೆಲವು ಸಾಲುಗಳಾದರೂ ಕವಿತೆಗಳಾಗುವ ತುಡಿತ ಇರಿಸಿಕೊಂಡಿವೆ ಅನಿಸಿದ್ದರಿಂದ ಅಂಥವನ್ನೂ ಆರಿಸಿ ಇಲ್ಲಿ ಜಾಗ ಕಲ್ಪಿಸಲಾಗಿದೆ.

ಇನ್ನು ಮಿಕ್ಕಂತೆ ಕೆಲವು ಒಳ್ಳೆಯ ಕವಿತೆಗಳು ದೊರಕಿದವು; ಆದರೆ ಕವಿಗಳೆಲ್ಲರ ಒಪ್ಪಿಗೆ ಪಡೆಯಬೇಕು ಎನ್ನುವ ನಿಬಂಧನೆ ಇದ್ದ ಕಾರಣ ಕೆಲವು ಕವಿಗಳನ್ನು ಮಾತಿಗೆ ದೊರಕಿಸಿಕೊಳ್ಳುವುದೂ ಕಷ್ಟವಾಯಿತು. ಹಾಗಾಗಿ ಅವರ ಕವಿತೆಗಳನ್ನು ಸುಮ್ಮನೆ ಮಲಗಿಸಬೇಕಾಯಿತು. ಈ ತಾಂತ್ರಿಕ ನಿಬಂಧನೆಗಳಿಲ್ಲದಿದ್ದರೆ ಮತ್ತು ಕವಿಗಳು ಪರವಾನಗಿ ನೀಡುವ ಗೋಜು ಇಲ್ಲದಿದ್ದರೆ ಮತ್ತೊಂದಿಷ್ಟು ಕವಿತೆಗಳು ಇಲ್ಲಿ ಕಾಣಿಸಿಕೊಳ್ಳುತ್ತಿದ್ದವು. 'ಸಾಧಾರಣ ಕವಿಗಳು ಅನುಕರಿಸುತ್ತಾರೆ, ಉತ್ತಮ ಕವಿಗಳು ಕದಿಯುತ್ತಾರೆ' ಎನ್ನುವ ಟಿ.ಎಸ್. ಎಲಿಯಟ್‌ನ ಮಾತು ನೆನಪಿಗೆ ಬರುತ್ತಿದೆ. ಇದನ್ನು ಯಾವ ಹಿನ್ನೆಲೆಯಲ್ಲಾದರೂ ಬಳಸಿಕೊಳ್ಳಬಹುದು. ಉದಾಹರಣೆಗೆ ಕವಿಗಳ ಪರವಾನಗಿ ಪಡೆಯುವುದು, ಅಕಾಡಮಿಗಳ ನಿಬಂಧನೆಗಳು ಇತ್ಯಾದಿ..

ಈ ಎಲ್ಲವುಗಳ ಹೊರತಾಗಿ ಇಲ್ಲಿನ ಎಲ್ಲ ಕವಿ/ಕವಯತ್ರಿಯರನ್ನು ಮಾತಿಗೆ ದಕ್ಕಿಸಿಕೊಂಡು ಅವರ ಅನುಮತಿ ಪಡೆದಿದ್ದೇನೆ. ಎಲ್ಲರೂ ಯಾವ ಚಕಾರ, ತೀವ್ರ ವಿಚಾರಣೆ ನಡೆಸದೆ ಒಂದೇ ಮಾತಿಗೆ ತಮ್ಮ ಅನುಮತಿ ನೀಡಿದ್ದಾರೆ. ಈ ಎಲ್ಲರಿಗೆ ನಾನು ಅಭಾರಿ. ಜೊತೆಗೆ ನನ್ನನ್ನು ಸಂಪಾದಕನನ್ನಾಗಿಸಿ ಕವಿತೆಗಳನ್ನು ಓದುವ ಅನಿವಾರ್ಯತೆ ಸೃಷ್ಟಿಸಿ ಹಲವು ಸಂದರ್ಭಗಳಲ್ಲಿ ನನ್ನನ್ನು ಮಿಡುಕುವಂತೆ ಮಾಡಿದ ಕರ್ನಾಟಕ ಸಾಹಿತ್ಯ ಅಕಾಡಮಿಗೆ ವಂದನೆಗಳು. ಕವಿತೆಗಳ ಸಂಖ್ಯೆ ಮತ್ತು ಗಾತ್ರದ ಹಂಗು ತೊರೆದು ಓದುವ ಕಷ್ಟ ಸುಖ ನಿಮ್ಮದಾಗಲಿ.

**– ಎನ್.ಸಿ. ಮಹೇಶ್**

# ಪರಿವಿಡಿ


| | | |
|---|---|---|
| ಅಧ್ಯಕ್ಷರ ಮಾತು | | iii |
| ಸಂಪಾದಕರ ಮಾತು | | vii |
| 1. ಇದೆಂತಹ ಗಡಿಗಳು | ಡಾ. ಕೆ. ಷರೀಫಾ | 1–3 |
| 2. ಜಾಖಾಉ ಕುದುರೆ | ಹುರುಕಡ್ಲಿ ಶಿವಕುಮಾರ | 4–5 |
| 3. ನೆಲಾನುಂಗಿದ ಮ್ಯಾಲ | ಹಣಮಂತ ತಾಸಗಾಂವಕರ | 6–6 |
| 4. ಕಾರ್ಬನ್ – ಕಾರ್ಬನ್ | ಡಾ. ವಿರೂಪಾಕ್ಷ ಕೆ. ಬಣಕಾರ್ | 7–8 |
| 5. ಕವಡೆ ಕನ್ಯೆಯ ಮಹಾಕೂಟ | ಲಕ್ಷ್ಮೀಪತಿ ಕೋಲಾರ | 9–12 |
| 6. ಮಹಾ ಪರಿನಿರ್ವಾಣ | ರೂಪ ಹಾಸನ | 13–15 |
| 7. ಕಡಲು – ಕವಿತೆ | ರವಿಶಂಕರ ಒಡ್ಡಂಬೆಟ್ಟು | 16–16 |
| 8. ಕಾಲ – ಪ್ರಕ್ರಿಯೆ | ಸಂತೋಷ ಅಂಗಡಿ | 17–18 |
| 9. ಸತ್ಯದ ಪಣ ತೊಟ್ಟು | ನಾಗರಾಜ ವಸ್ತಾರೆ | 19–20 |
| 10. ಬರೆಯುವಾಗ | ಆರ್. ತಾರಿಣಿ ಶುಭದಾಯಿನಿ | 21–21 |
| 11. ಕೆಲವು ಪದ್ಯಗಳು | ಕೆ.ಪಿ. ಮೃತ್ಯುಂಜಯ | 22–25 |
| 12. ಖಬರಸ್ಥಾನ | ಶಿ.ಜು. ಪಾಶ | 26–26 |
| 13. ಪುಪ್ಪಿ | ಆರೀಫ್ ರಾಜಾ | 27–28 |
| 14. ಯುಗನದ್ಧ | ಎಸ್. ನಟರಾಜ್ ಬೂದಾಳು | 29–29 |
| 15. ‘ಅವಳು’ ಎಂಬ ಎರಡು ಗಜಲ್‌ಗಳು | ಶೂದ್ರ ಶ್ರೀನಿವಾಸ್ | 30–31 |
| 16. ಕೋಐನ್‌ಗಳು | ಚಂದ್ರಕಾಂತ ಕುಸನೂರು | 32–33 |
| 17. ಹೀಗೊಂದು ಬೆಳಗು | ಡಾ. ಸತ್ಯಾನಂದ ಪಾತ್ರೋಟ | 34–36 |
| 18. ಅವಗುಣ | ಎಸ್.ಜಿ. ಸಿದ್ದರಾಮಯ್ಯ | 37–38 |
| 19. ಮುಗಿಲಿನೊಡನೆ ಮಾತುಕತೆ | ಕೆ.ವಿ. ಅಕ್ಷರ | 39–41 |
| 20. ದೇಹ ಸಂಬಂಧ | ವಿವೇಕ ಶಾನಭಾಗ | 42–42 |
| 21. ಚಿತ್ರಬುತ್ತಿಯ ಬಿಚ್ಚು | ಸ. ರಘುನಾಥ | 43–44 |
| 22. ಅರ್ಧಕಿಲೋ ಸಮುದ್ರ | ಜಯಂತ ಕಾಯ್ಕಿಣಿ | 45–46 |
| 23. ಬೇರು ಬಿತ್ತವಾಗುವ ಪರಿ | ಡಾ. ಎಚ್.ಎಸ್. ಅನುಪಮಾ | 47–48 |
| 24. ಧಂ ಧಮಾಕಾ ಸೇಲ್ | ಸವಿತಾ ನಾಗಭೂಷಣ | 49–50 |
| 25. ಡಾಲಿ–ಅಕ್ಕಮಹಾದೇವಿಯ ಯುಗಳ ಗೀತೆ | ಅನಿತಾ ಹುಳಿಯಾರ್ | 51–52 |
| 26. ಭೂಮಿ ನಗುತಲಿದೆ | ಡಾ.ಎಚ್.ಎಸ್.ರಾಘವೇಂದ್ರರಾವ್ | 53–53 |

| | | |
|---|---|---|
| 27. ಸೌಂದರ್ಯದ ಶಿಲ್ಪ | ಜ್ಯೋತಿ ಗುರುಪ್ರಸಾದ್ | 54–55 |
| 28. ಕನಸುಗಳ ಬಿತ್ತಿರಿ | ಎಸ್. ಮಾಲತಿ | 56–56 |
| 29. ನಿನ್ನ ಬೆತ್ತಲೆಗೆ ನನ್ನ ದಿರಿಸು | ವಸಂತ ಬನ್ನಾಡಿ | 57–57 |
| 30. ಅಭಯ | ಎಂ.ಎಸ್.ಆಶಾದೇವಿ | 58–59 |

**2013**

| | | |
|---|---|---|
| 31. ಹಿಡಿಮಣ್ಣನ್ನು ಕನವರಿಸುತ್ತಿದ್ದೇನೆ | ಲಕ್ಕೂರು ಆನಂದ | 63–65 |
| 32. ಕಾಯ್ತಾ ಇದ್ದೀನಿ ಎಷ್ಟೊತ್ತಿಗೆ ಕತ್ಲೆ ಆಗುತ್ತೆ ಅಂತ | ಸುಬ್ಬು ಹೊಲೆಯಾರ್ | 66–67 |
| 33. ನವಿಲ ತತ್ತಿಯೊಳಗಿತ್ತೇ ಈಸೊಂದು ಕತ್ತಲು... | ಲಕ್ಷ್ಮೀಪತಿ ಕೋಲಾರ | 68–69 |
| 34. ನಮ್ಮ ರಸ್ತೆ ಅಗಲವಾಗಿ | ಎಸ್. ಮಂಜುನಾಥ್ | 70–71 |
| 35. ಮನವ ಕದ್ದ ಮುಗ್ದೆಗೆ | ಆರತಿ ಎಚ್.ಎನ್. | 72–73 |
| 36. ಪ್ರಳಯ ಬಂತೆ | ವಿಷ್ಣು ನಾಯ್ಕ | 74–75 |
| 37. ಈಜ ಬೇಕು ನೀಳ ಬೆನ್ನಲ್ಲಿ | ಹರವು ಸ್ಫೂರ್ತಿಗೌಡ | 76–76 |
| 38. ಸಹೃದಯರ ಸಹಜ ಕೃತಿ ಪರೀಕ್ಷೆ | ಡಾ॥ ನಟರಾಜ್ ಹುಳಿಯಾರ್ | 77–79 |
| 39. ಅಧಿಕಾರಿ | ಬಸವರಾಜ ಹೂಗಾರ | 80–82 |
| **ಕವಿಗಳ ವಿಳಾಸ** | | 83–87 |

# ಇದೆಂತಹ ಗಡಿಗಳು

ಇದೆಂತಹ ಗಡಿಗಳು
ಎಂತಹ ವಿಭಾಜಕ ರೇಖೆಗಳು ?
ಗಂಗೆಯ ತಟದಲಿ
ಕುಂಟಬಿಲ್ಲೆಯಾಡುತ್ತ ಎಲ್ಲರೊಂದಿಗೆ
ಕೂಡಿ ಬೆಳೆದವಳು ನಾನು
ಇಲ್ಲಿ ಮುಹಾಜಿರಳಾಗಿರುವೆ
ಎಂತಹ ವಿಚಿತ್ರ!
ಅಲ್ಲಿಮಾಮರಗಳ ಹತ್ತಿ
ಮರಕೋತಿ ಆಡಿದ್ದವಳು.
ನದಿ, ಬೆಟ್ಟ, ಗಿಳಿ, ಕೋಗಿಲೆ
ಹಿಂಡು ಹಿಂಡು ಗೆಳತಿಯರು
ಅಲ್ಲಿಯೇ ಬಿಟ್ಟು ಬಂದಿರುವೆ
ಗಂಗೆಯ ತಟದಲ್ಲಿಯೇ
ಇಲ್ಲೇಕೆ ಒಂಟಿಯಾಗಿರುವೆ !
ನೋಟು ಬುಕ್ಕಿನ ಪುಟಗಳ ಮಧ್ಯೆ
ಬಚ್ಚಿಟ್ಟ ನವಿಲುಗರಿ
ಚಾಚಾನ ಪುಟ್ಟ ಮಗಳೀಗ
ಈಗ ಬೆಳೆದು ದೊಡ್ಡದಾಗಿರಬೇಕು
ಚಾಚಾನ ಪುಟ್ಟ ಮಗಳೀಗ
ಮರ್ಯಾದೆಯ ದುಪಟ್ಟಾ ಹೊದೆಯುತ್ತಿರಬೇಕು
ಅಲ್ಲಿಂದ ಬಿಟ್ಟು ಬರುವಾಗ
ಅವಳಿನ್ನೂ ಪುಟ್ಟಮಗು
ತೊಟ್ಟಿಲಲಿ ಒಂದೇ ಸಮ ಅಳುತ್ತಿದ್ದಳು
ಅಮ್ಮನ ಜಹಾಜಿನಾಕಾರದ

ಸುಂದರ ಪಾನ್‌ದಾನ್, ಉಗಾಲ್‌ದಾನ್‌ಗಳು
ಅಪ್ಪನ ಸುರಾಯಿ ಆಕಾರದ
ಸುಂದರ ಕುಸುರಿ ಕೆತ್ತನೆಯ
ಆ ಮುರಾದಾಬಾದಿ ಹುಕ್ಕಾಗಳು
ಅಲ್ಲಿಯೇ ಬಿಟ್ಟು ಬಂದಿದ್ದು
ಆ ಪಡುಸಾಲೆ ನನಗಿನ್ನೂ ನೆನಪಿದೆ
ಛಪ್ಪರದಲ್ಲಿಯೇ ಬಿಟ್ಟು ಬಂದಿದ್ದ
ನನ್ನ ಆ ಪುಟ್ಟ ಚಪ್ಪಲಿಗಳು
ಒಮ್ಮೆಲೇ ಅದೇನಾಯಿತೋ ಗೊತ್ತಿಲ್ಲ
ದೇಶ ವಿಭಜನೆಯಾಗುತ್ತಿದೆಯೆಂದರು.
ಅಪ್ಪ ದಡ ದಡನೇ ರೈಲು ಹತ್ತಿಸಿದ್ದರು
ನನ್ನೊಡನೆ ಆಡುತ್ತಿದ್ದ ಗೆಳತಿಯರ
ಕೈ ಕೊಸರಿ ಅಪ್ಪನ ಕೈ ಹಿಡಿದಿದ್ದೆ
ರೈಲಿನ ಡಬ್ಬ ಹಿಡಿದು ಅಳುತ್ತಿದ್ದ
ಅಜ್ಜಿಯನ್ನು ಅಲ್ಲಿಯೇ ಬಿಟ್ಟು ಬಂದಿದ್ದೆ
ಅಮ್ಮಿ, ಅಬ್ಬಾ ಭಯ್ಯಾನೊಂದಿಗೆ
ಕರಾಚಿಯ ರೈಲು ಹತ್ತಿದ್ದೆ
ಅಲ್ಲಿಂದ ಯಾರಾದರೂ ಬಂದರೆ ಸಾಕು
ನನ್ನ ಹಳೇ ನೆನಪಿನ ಬುತ್ತಿ ಬಿಚ್ಚಿಕೊಳ್ಳುವೆ
ಗಂಗೆಯ ತಟದ ಆ ಮನೆ ಕಿಟಕಿಯಲಿ
ಬಿಟ್ಟು ಬಂದಿರುವ ನನ್ನ ಪುಟ್ಟಗೊಂಬೆ
ಅಮ್ಮನ ಪಾನದಾನ, ಅಪ್ಪನ ಹುಕ್ಕಾ
ನೋಟುಬುಕ್ಕಿನ ನವಿಲುಗರಿ
ಗೆಳತಿಯ ದಂಡು, ಅವರ ಮದುವೆ,
ಮಕ್ಕಳು, ಇತರೇ ಕುಶಲ ವಿಚಾರಿಸುವೆ!

ಮೊಹರಂ ಬಂದಿತೆಂದರೆ ಸಾಕು
ನನ್ನೂರು ಮದುಮನೆಯಂತೆ ಕಂಗೊಳಿಸುತ್ತಿತ್ತು
ಹಿಮಾಲಯದಿಂದ ಹರಿಯುವ
ಪ್ರತಿಯೊಂದು ನದಿಯೂ ನನಗೆ

ವಜು ಮಾಡು ಬಾ ಎಂದು ಕರೆಯುತ್ತಿದ್ದವು
ಚಿನಾಬ್ ನದಿಯ ನೀರನ್ನು ಮುಟ್ಟದಿರು
ನೀನು ಮುಹಾಜಿರಳು ಎಂದಾಗ
ನೋವಿನಿಂದ ಮನಸು ಮಿಡಿಯುತ್ತಿತ್ತು
ಗಾಲಿಬ್, ಇಕ್ಬಾಲ್, ಸೂರ್, ಕಬೀರರ
ಗ್ರಂಥಗಳೆಲ್ಲ ಅಲ್ಲಿಯೇ ಇಟ್ಟಿರುವೆ
ನನ್ನ ಜೀವವೇ ಅಲ್ಲಿ ಬಿಟ್ಟುಬಂದಿರುವೆ
ದೇಹ ಮಾತ್ರ ಇಲ್ಲಿದೆ ಸುಮ್ಮನೆ
ಮನಸಿಗೆಂತಹ ಗಡಿಗಳು
ಎಂತಹ ವಿಭಾಜಕ ರೇಖೆಗಳು ?

**– ಡಾ॥ ಕೆ. ಷರೀಫಾ**

**'ಹೊಸತು' ಪತ್ರಿಕೆ 2012**

# ಜಾಖಾಲು ಕುದುರೆ!

ಟಕ್ ಟಕ್, ಟಕ್ ಟಕ್
ಠಕ್ ಠಕ್, ಠಕ್ ಠಕ್
ಕುದುರೆ ಓಡುತಿದೆ ನೋಡಿದಿರಾ ?!
ಹೊಸ ಕಸಿಯ 'ಜಾಖಾಲು' ಕುದುರೆಯಿದು
ಲಂಗು ಲಗಾಮಿಲ್ಲದೆ ನೆಗೆಯುವ ಕುದುರೆ
ಕಣ್ಣ ಪಟ್ಟಿಯನೂ ಕಿತ್ತೆಸೆಯುವ ಕುದುರೆ
ನಟ್ಟು, ಬೋಲ್ಟು, ಸ್ಪ್ರಿಂಗು, ಚೈನು
ತೊಟ್ಟ ಕುದುರೆಯಿದು ಬಲ್ಲಿರಾ ?!
ಇದು ತಿನ್ನೋದು ಹಣವನ್ನು ಮಾತ್ರ
ಕುಡಿಯೋದು ಪೆಟ್ರೋಲನ್ನು ಮಾತ್ರ
ತೇಗಿದರೆ ಧಗೆಯ ಹೊಗೆ ಮಾತ್ರ !
ಲದ್ದಿಯಲ್ಲೋ.... ರೈತರ ಹೆಣ ಮಾತ್ರ!!
ಅಮೆರಿಕಾ, ರಷಿಯಾ, ಇಥಿಯೋಪಿಯಾ
ಭಾರತ, ಚೈನಾ, ಸೋಮಾಲಿಯಾ...
ದೇಶ ದೇಶವನ್ನೇ ತೊತ್ತಳ ತುಳಿಯುತ
ಕುದುರೆ ನೆಗೆಯುತಿದೆ ನೋಡಿದಿರಾ ?
ಎದುರು ಬಂದವರ ತಲೆಯನೆ ಕುಕ್ಕಿ
ಅಡ್ಡಡ್ಡ ಬಂದವರ ತಲೆಯನೆ ಕುಕ್ಕಿ
ಅಡ್ಡಡ್ಡ ಬಂದವರ ಹೆಡೆ ಮುರಿದಿಕ್ಕಿ
ಅಂತರಿಕ್ಷಕೂ ಕೇಕೆ ಮುರಿದಿಕ್ಕಿ
ಅಂತರಿಕ್ಷಕೂ ಕೇಕೆ ಹಾಕುತಾ
ಕುದುರೆ ಕೆಲೆಯುತಿದೆ ಕೇಳಿದಿರಾ ?
ಟಕ್ ಟಕ್, ಟಕ್ ಟಕ್

ಠಕ್ ಠಕ್, ಠಕ್ ಠಕ್
ಕುದುರೆ ಓಡುತಿದೆ ನೋಡಿದಿರಾ ?!
(ಕಣ್ಣಿಗೆ ಕಾಣದ ಜಾಗತೀಕರಣ,
ಖಾಸಗೀಕರಣ, ಉದಾರೀಕರಣದ ಕುದುರೆ!)

**– ಹುರುಕಡ್ಲಿ ಶಿವಕುಮಾರ**

**'ಹೊಸತು' ಪತ್ರಿಕೆ 2012**

# ನೆಲಾನುಂಗಿದ ಮ್ಯಾಲ

ಭೂಮಿ ನುಂಗ್ಯಾರೋ ಭೂಮ್ಯಾನ ಅದಿರ ನುಂಗ್ಯಾರೋ
ತಿನ್ನೊದೆಲ್ಲಾ ತಿಂದ ಮ್ಯಾಗ ವೇಷಾ ಹಾಕ್ಯಾರೋ
ದೇವರಿಗಿ ಟೊಪಿಗಿ ಇಟ್ಟಾರೋ!

ಸಾಚಾ ಆಗ್ಯಾರೋ ದಾನಾಧರ್ಮಕ ನಿಂತಾರೋ
ಬಡ್ತನ ಅಂದಾರೋ ಬವಣಿ ಉಂಡೇ ಬಂದೇವೋ
ಕಿಚ್ಚಿಲೆ ತಂದೇವೋ ಕಾಪ್ಪರ ಹತ್ತೇಬಿಟ್ಟೇವೋ!

ಹರಕ ಅಂಗಿ ತ್ಯಾಪಿಚಣ್ಣ ಉಟಗೊಂಡ ತಿರುಗೇವೋ
ಬೆಲ್ಲದ ಕರಿ ಚಾ ಕುಡದ ಚಿಣಿಫಣಿ ಆಡೇವೋ
ಅದಕs ನೋಟಿಲೆ ಅರಮನಿಕಟ್ಟೇವೋ ಬಂಗಾರಸಿಂಹಾಸನ
ಏರೇನೋ!

ಮಣ್ಣತಿಂದೇವೋ ಬ್ರಹ್ಮಾಂಡ ಬಾಯಾಗ ಹಿಡದೇವೋ
ಅವ್ವನ ಪಾದಕ ಉಧೋ.... ಉಧೋ... ಅಂದೇವೋ
ಬಿದ್ದೂ ಎದ್ದೂ ಬಯಲಾಟ ಮಾಡೇವೋ!

ಮುದ್ದಿಸಕ್ರಿ ಹಂಚೇವೋ ಊರ ಬಾನಾ ಹಾಕೇವೋ
ಬಣ್ಣದಗರಿ ತೆಲಿಮ್ಯಾಲಾಡಿಸಿ ಧೂ.... ಲಾ.... ಆಡೇವೋ
ಮ್ಯಾಕ ಗುಲಾಲ್ ತೂರೇವೋ!

ಕಣ್ಣ ಒರಿಸ್ಯಾರೋ ಕಣ್ಣಾನ ಧೂಳ ಊದ್ಯಾರೋ
ಹೀರೋ ಹೋಗಿ ಜೋಕರ ಆಗಿ ಝೀರೋ ಮ್ಯಾಡ್ಯಾರೋ
ಸೀದಾ ಅಲ್ಲಿಗೇ ಕಳಿಸ್ಯಾರೋ
ಚಕ್ಕಿ ತಿರುವಾಕ ಹಚ್ಚಾರೊ ಬುದ್ಧೀಕರಿಸ್ಯಾರೋ!

**– ಹಣಮಂತ ತಾಸಗಾಂವಕರ**

**'ಹೊಸತು' ಪತ್ರಿಕೆ 2012**

# ಕಾರ್ಬನ್ – ಕಾರ್ಬನ್

ನಾನು ಕಡುಗಪ್ಪಿದ್ದರೇನು
ಜಗದ ಚೇತನ ನಾನು
ಜೀವದಾತ ನಾನು
ಸು–ಸೊಬಗೇ ನಾನು
ಸುತ್ತಸಾಗಿತ್ತು ಕಾರ್ಬನ್
ಮಾಡಿಸಿ ಕುಣಿದೆವು ನಾವು.

ಯುಗದಿಂದ ದ್ವಾಪರದೊರೆಗೆ
ನಂಜಿದ್ದು ಈಶ್ವರಗೆ
ಕರಾಳ ಕಲಿಯುಗದಿ
ಮಗುವದು ಕೇವಲ ನನಗೆ
ತೊಡಗಿತ್ತು ಕಾರ್ಬನ್
ತೊಡಗಿದೆವು ನಾವು

ಯುಗ ಯುಗದಿ ಸಾಗಿರುವ
ವಾಯು ಚಂಡಿನಾಟದಲಿ
ಛಳಿ, ಮತ್ತೊಮ್ಮೆ ಬಿಸಿ

ಒಮ್ಮೆ ಅತಿ ಅತಿವೃಷ್ಟಿ, ಒಮ್ಮೆ ಅನಾವೃಷ್ಟಿ
ಕಣ್ಣುಮುಚ್ಚಾಟವಾಡಿತ್ತು ಕಾರ್ಬನ್
ದಿಕ್ಕು–ದೆಶೆ ತಪ್ಪಿದೆವು ನಾವು

ಅಂತ್ಯವಿರದ ಅನಂತ ಲೋಭ
ಆವಿಷ್ಕಾರಗಳ ವೇಗದಿಂದೆದ್ದ ಧೂಳು
ಚೀತ್ಕರಿಸುತ್ತ ಮಣ್ಣಾದ ಕಾಡು

ಸೇರಿ... ಕಾರ್ಬನ್ನಿಗಿಟ್ಟವು ಕಿಚ್ಚು
ಕಾರ್ಬನ್ನಿನ ಕಣ್ಣು ಕೆಂಪಡರಿತ್ತು
ನಮ್ಮ ದೇಹ ಬಿಳುಚಿಗೊಂಡಿತು.

ತಣಿಯಲಿಲ್ಲ ಕಾರ್ಬನ್ನಿನ ಕೋಪ
ಯದ್ವಾ–ತದ್ವಾ ಓಡಿದ ವರುಣ
ನೀರಿಲ್ಲದೇ ಬಿರಿಯಿತು ಭೂಮಿ
ಎತ್ತನೋಡಿದರತ್ತ ನಿಸರ್ಗದಟ್ಟಹಾಸ
ಠೇಂಕರಿಸುತ್ತ ಸಾಗಿತ್ತು ಕಾರ್ಬನ್
ಆವಿಯಾಗತೊಡಗಿದೆವು ನಾವು

ಭೂ–ಜಲ–ವಾಯುಮಂಡಲದಿ
ದಿನವೂ ಸುಡುತ್ತಿರುವೆ ನಾನು
ಅಲ್ಪವಾದರೂ ತಣಿಸಿರೆನ್ನ
ತಪ್ಪೀತು ಮಹಾ–ಪ್ರಳಯ
ಸೃಷ್ಟಿಚೇತನವಲ್ಲವೆ ನಾನು
ಚೀತ್ಕರಸುತ್ತಿತ್ತು ಕಾರ್ಬನ್
ಶ್ರವಣಹೀನರಾಗಿದ್ದೆವು ನಾವು

**– ಡಾ. ವಿರೂಪಾಕ್ಷ ಕೆ. ಬಣಕಾರ್**

**'ಹೊಸತು' ಪತ್ರಿಕೆ 2012**

# ಕವಡೆ ಕನ್ಯೆಯ ಮಹಾಕೂಟ!

ಮುಖವನ್ನೆ ಮುಕ್ಕುವಂತೆ ದಿಟ್ಟಿಸಿದ ಕನ್ನಡಿಯಲ್ಲಿಂದು
ಮೀಸೆಯೆದ್ದು ಕುಣಿಯುತ್ತಿತ್ತು ತಕತಕನೆಂದು
ಹುಟ್ಟಬಾರದೆಡೆ ಕಚಗುಳಿ ಹುಟ್ಟಿ ದಿಗಿಲನ್ನು ಮೆಟ್ಟಿ
ಬೀದಿಗೋಡಿ ಬಂದೆ; ಕತ್ತಲ ಪೊದೆಯ ತುಂಬಾ ಬೆಳಕಿನ ಹೂಗಳು
ಗಾಳಿ ಪಲ್ಲಂಗದಲ್ಲಿ ಮಾಯೆ ನಿರ್ಮಾಯೆಯೊಂದಿಗೆ ಸೆಣಸುತ್ತ
ಮಾಳಿಗೆಯ ಅಂಚಿಂದ ಕರೀ ಬೆಕ್ಕೊಂದು ಯಾಮಾರಿ
ಬೀಳಬೀಳುತ್ತ ಹಂಸ ಅರಿವೆಯಾಯಿತೆಂಥ ಚೆಂದ!
ಕಾಳ ಬೆಕ್ಕು ಕಳ್ಳ ಬೆಕ್ಕು ಮಾಳ ಬೆಕ್ಕು ಮಳ್ಳ ಬೆಕ್ಕು
ಕನ್ನಡಿಯ ಚೋದ್ಯಕ್ಕೇ ಕನ್ನಡಿ ಹಿಡಿವ ವಿಸ್ಮಯ!
ಥರಥರಗುಟ್ಟಿದ ಕನ್ಯಾನೆತ್ತರ ನದಿಗಳಲ್ಲಿ
ಕಾಮ ಮದದ ಕಸ್ತೂರಿ ಜಂತಿ ಹೊಕ್ಕಾಡಿ ಈಜತೊಡಗಿತು

ಮೀಟಬಾರದ ಎಡೆಯದು; ಮೀಟಿಯೇ ಮೀಟಿತು
ಮೀಟಬಾರದ ಹೊತ್ತದು; ಮೀಟಿಯೇ ಮೀಟಿತು
ಮೀಟಬಾರದ ತಲ್ಲಣವದುಲ ಮೀಟಿಯೇ ಮೀಟಿತು
ರಸ ವಿಶೇಷ ರಂಕು ಮಾಟದ ಮಾರ್ಮಿಕ ತಂತು
ಎಚ್ಚರದೆದೆಗೆ ಜೂಗರಿಸುವ ಕೆರಗಳಾಗಿಸಿ ಮೆಟ್ಟಿತು
ಲೋಕದ ಮೇಲೊಂದು ಲೋಕವೇ ಬಂದು ಕುಂತು
ರಾಗಗಳೇ ರಜಸ್ವಲೆಯಾಗುವಂತೆ ರಾಗಿಕಲ್ಲು ಬೀಸಿತು
ಪದಗಳನ್ನರೆಯುತ್ತ ಹುಚ್ಚುಗಾಬೆದ್ದು ಕಣ್ಣುಗಳ ಮೇಲೆಲ್ಲಾ
ಕನಸಿನ ಧೂಳು ಧೂಳು ರಂಗಿನಮಲು!
ಅರಿವಾಗದೋಪಾದಿಯಲ್ಲಿ ಅರಿವೆಯಾದಳು ತಾನೇ
ಭೋಗ ವ್ಯಸನಿದೇಹ ಬೂರುಗದ ಜುಂಜಿಗಿಂತಲೂ ಹಗುರ
ನೆಲ ಒರೆಸಿ ಚಿಂದಿಯಾದರೂ

ಚಿಂತಿಸದೆ ಬತ್ತಿ ಹತ್ತಿ ಉರಿವ ಚಂದ್ರಸುಖದ ಥರ
ಕಂಕಾಳಿಯ ಎದುರಲ್ಲಿ ಕವಡೆ ಹಾಕಿಸಲೆಂದೇ
ಕಣ್ಣ ಜಾತ್ರೆಯ ಕದ ತೆರೆದು
ಮಹಾಕೂಟದ ಮುಕ್ಕಣ್ಣನ ಜಾತ್ರೆಗೆದ್ದಳು

2

ತನಿ ಹೂಗಳು ಗಂಧವ ಮೆಲ್ಲುತ್ತ ಮತ್ತನ್ನು ಚೆಲ್ಲುತ್ತಿದ್ದವು
ಹಮ್ಮೀರನೆದೆ ಬಾಣಲಿಯಲ್ಲಿ ಮಾಯೆ ಮಿಡುಕಿ ಮಸಿಯಾಗುತ್ತಿತ್ತು
ಏಳಾನೆ ಕದಗಳ ಅವನೆವೆಗಳನ್ನು ಪುಟ್ಟಪೂರ ತೆರೆದಳಲ್ಲ
ಆ ಜವ್ವನೆ–ಎರಗೆರಗಿ ನವೆದ ಜೀವದ ಮೇಲೆ ರವ್ವರವ್ವನೆ
ಆಲಿಪಿ ಕಾಮದಚ್ಚರಿಗಳ ಕೊರೆಕೊರೆದು
ತೇರಿಗೆ ತೆರಳಿ ಬಾರೆಂದು ನಿರೂಪವ ನೆಟ್ಟು ಹೋದಳಲ್ಲ?!
ಚಣ ನಿಲ್ಲದ ಚೆಂಬಳೆಗಳ ನಾದ ತೂಬು ತೆರೆದೇ ಬಿಟ್ಟಳಲ್ಲ?
ಗಮ್ಮೆನ್ನುವ ಗಾರುಡಿಯ ಗಳಿಗೆ ನಂಬಿನೋಡಲೇ?
ಹಮ್ಮೀರ ನಾ – ಜಾರ ಜೋಗಿಯಂತೆರಗಿ ಬಿಡಲೇ?
ಪಂಜರದಲ್ಲೇ ಇದ್ದ ತಳಿಯ ಗಿಳಿಗಳಿಗೆ
ಜೋಳಪಾಳಿಯ ಗುಟ್ಟಿನ ಗುಟಕು ಕೊಟ್ಟು
ಎಳೆದೆಳೆಯುತ್ತ ಕಾಮದೇರು ಹೊರಟೇ ಬಿಟ್ಟ
ಜಡೆಗಟ್ಟಿದ ಲಿಂಗವೂ ತಾರುಮಾರು!

3

ಜರಿ ಅರಿವೆ ತೊಟ್ಟಂತೆ ಜಾತ್ರೆಯ ತುಂಬಾ ಗಾಳಿ ಕಾಳಿ
ಇಬ್ಬರು ನಿಂತೆಡೆ ಒಗಟಿನ ಹಂದರ
ಮಂದಿ ಕುಂತೆಡೆ ಸ್ವಪ್ನ ಮಾಯಾ ಮಂದಾರ
ದೂರ ನಿರ್ಜನ ಬಿದಿರು ಮೊದೆಯಲ್ಲೊ
ಬೆದೆ ಹತ್ತಿದ ಒಂಟಿದೆಯ್ಯದ ಹೊಂಕಾರ!

ಬಿಳಿಲುಗಳ ನಡುವೆ ಸ್ವಪ್ನ ಕೌದಿಯನ್ನೆ ಹಾಸಿ
ಶುಖಭಾಷಾ ಕೋವಿದ ಕಣ್ಣ ಕವಡೆಗಳೊಂದಿಗೆ ಕುಂತಿದ್ದ

ಏಳು ಮಲೆಗಳನ್ನು ಏಳು ಚಣದಲ್ಲಿ ಸುತ್ತುತ್ತಿದ್ದ ಗಿಳಿಗಳವು
ದುಃಖದೊಂದೆವೆ ಸುಖದೊಂದೆವೆ ಮಿಟುಕಾಡಿಸುತ್ತಿದ್ದವು
ಜ್ವಾಲೆಯ ತುಣುಕೊಂದು ತೇಲಿ ಬಂದಂತೆ ಬಂದೇ ಬಂದಳು
ಬೆಕ್ಕು ಅರಿವೆಯಾದ ಚೋದ್ಯದ ಪ್ರಶ್ನೆಯಿಟ್ಟಳು
ಕೌದಿಯೆದುರು ಲಜ್ಜಾಗೌರಿಯಂತೆ ಭಂಗಿಯಲ್ಲಿ ತಂಗಿ!
ಕೂಡಲೇ ಅರೆಕಳಿಕೆಯ ಕವಡೆಗಳುರುಳಿದವು
ಕೂಡಲೇ ಅರೆಆಕಳಿಕೆಯ ಕವಡೆಗಳುರುಳಿದವು
ಅಂಗಾತ ಉರುಳಿದವು; ಪಾತಾಳ ಬಗೆದವು
ಮಖಾಡೆ ಮಲಗಿದವು; ಬಾಣಲಿಂಗದ ತುದಿ ಸವರಿದವು
ಕವಡೆಗಳಲ್ಲಿ ಕಡಲುಗಳೇ ಉರುಳಿದಂಥ ಭೋರ್ಗರೆತ!
ಹನಿಯೊಂದನ್ನು ಕಣ್ಣು ಹಿಡಿದರೆ
ಮನದ ತುಂಬಾ ಮಳೆಯ ಮುಸಲ ಧಾರೆ
ನೆನೆ ನೆನೆದಂತೆಲ್ಲಾ ನುಲಿದ ನೆನಪುಗಳ ಸೂರೆ
ಕಡಲುಗಳನ್ನೇ ನುಂಗುವಂತಹ ಮಜಭೂತು ಮೀನೊಂದು
ಬಾಲ ಬಡಿದೇಟಿಗೇ ಕೋಟಿ ಕೋಟಿ ಹನಿಗಳು ಸಿಡಿದು
ಕಾಮನಿಮೀಲಿತ ಮಳೆಬಿಲ್ಲುಗಳು ಗುರಿಯಿಟ್ಟವು
ಲಜ್ಜಾಗೌರಿಯ ರಕ್ತಮಾಂಸಗಳ ಕಾಳಿ ಕವಡೆಗೆ
ಚೋದ್ಯವ ಬಗೆದರೆ ಚೋದ್ಯಗಳೇ ಎದ್ದೆದ್ದು ಕುಣಿದು

ಮಳೆಬಿಲ್ಲಿನ ಸಂಧಿಗಳೆಡೆಯಿಂದ ಇಣುಕಿ ಕೆಣಕುತ್ತಿದ್ದವು
ಶುಕ ಭಾಷಿಕ ಪಂಚರಂಗಿ ಕಣ್ಣುಗಳು!
ಕನ್ಯಾ ಬೆರಗಿನ ರತಿ ಮದವನನು ಮುದವಾಗಿ ಮರ್ದಿಸೆ
ಜಮ್ಮು ನೇರಳೆ ಕಣ್ಣುಗಳು ಜುಮ್ಮೆಂದವು
ಕಣ್ಣುಗಳು ಕವಡೆಗಳಾಗಿ ಕವಡೆಗಳೇ ಕಣ್ಣುಗಳಾದವು
ದೇಹದಲ್ಲಿ ಮಹಾಕೂಟದ ಜಾತ್ರೆ ನೆರೆದು
ಬಾಣಲಿಂಗದ ತೇರು ಲಂಘಿಸಿತು
ಮಳೆಬಿಲ್ಲುಗಳ ಹೊರೆ ಕಟ್ಟಿ
ಆಸೆಗಳ ಜಂತಿಗೆ ನೇತುಬಿಟ್ಟು
ಜಾತ್ರೆ ಬೆಂತರವನ್ನು ಎದೆಗವಿಯಿಂದ ಹೊರದೂಡಿ

ನಿರುಮ್ಮಳ ಖಾಲಿಯಾದಳು ಕಾಲಿ
ಬೆಂಬಿದ್ದ ಪಂಚರಂಗಿಗಳು ಎಳೆದಾಡಿ ತೆಕ್ಕೈಸಿದವು
ಕಾಮ ಮಿಲನೋತ್ಸಾಹದಲ್ಲಿ!
ಕಾಮವದು ಕಾಮವಲ್ಲ; ತಲ್ಲಣಗಳ ವಿರಾಮ
ಕನ್ನೆಯನ್ನು ಕನ್ನೆಯಂತಿರಲು ಬಿಡದೆ
ಹಠಮಾಡಿ ಕೂಟವಾಡಿ ಪುಟವಿಟ್ಟವು
ಅವಳು ಅವಳಲ್ಲ; ಅವನು ಅವನಲ್ಲ

ನಾನೆಂಬುದೆಂಥ ಮಿಥ್ಯವೋ ಸುಖದುತ್ತುಂಗದಲ್ಲಿ!
ನನ್ನನ್ನೆ ಇಲ್ಲಗೊಡಿಸುವುದೆಂಥ ಕಾರಣಿಕವೋ?

**– ಲಕ್ಷ್ಮೀಪತಿ ಕೋಲಾರ**

**‘ಹೊಸತು’ ಪತ್ರಿಕೆ 2012**

# ಮಹಾ ಪರಿನಿರ್ವಾಣ

1

ಕಾಂಡವೇ ಶಿಲೀಕೃತಗೊಂಡು
ಕಲ್ಲಾದ ಪಳೆಯುಳಿಕೆ, ಮರಗಲ್ಲಿನಲಿ
ಕೆತ್ತಿದ ಬುದ್ಧನಿಗೆ
ಅವಳಡುಗೆ ಮನೆಯೀಗ ತಪೋವನ
ನೀಳ ಕಣ್ಣು ಮುಚ್ಚಿ
ಧ್ಯಾನಕ್ಕೆ ಕೂತ ಅವನೊಂದಿಗೆ
ಅವಳ ನಿತ್ಯ ಕಸುಬಿನಲ್ಲೇ
ಮೌನ ಜುಗಲ್‌ಬಂದಿ.

2

ಸೊಪ್ಪು ಸೋಸುತ್ತಾ
ಕಾಳು ಬಿಡಿಸುತ್ತಾ
ಪಾತ್ರೆ ತೊಳೆಯುತ್ತಾ
ಮಗುವಿಗೆ ಹಾಲೂಡಿ
ಲಾಲಿ ಹೇಳುತ್ತಾ
ಮರಗಲ್ಲ ಬುದ್ಧನನ್ನು ನೆಟ್ಟಿದ್ದಾಳೆ
ಹೆಣ್ಣ ಪ್ರತಿರೂಪದ ಮೃತ್ತಿಕೆಯಲಿ

3

ಗಡಿಬಿಡಿಯಲ್ಲಿ ಕೈಸುಟ್ಟು
ಬೆರಳು ಕೊಯ್ದು
ಜಾರಿ ಬಿದ್ದು
ನೋವು ಉಮ್ಮಳಿಸಿ

ಬಿಕ್ಕಳಿಸಿದ ಸದ್ದು
ಒಂದಿಷ್ಟೇ ಕಣ್ತೆರೆದು ನೋಡಿ
ಥಟ್ಟನೆ ಮುಚ್ಚುವ ತಥಾಗತ!
ಅವಳ ನೋವಿಗೆ ಮಿಡುಕುವನೇ?
ತನ್ನ ಸಂಘಕ್ಕೇ ಹೆಣ್ಣ ನಿರಾಕರಿಸಿ
ಅವಳೊಡಲನೇ ಅಪಮಾನಿಸಿ
ಈ ಹಸಿಮಣ್ಣನೊದ್ದು ಮೇಲೇರಿದವನು?

4
ಆದರೀಗ...
ಈರುಳ್ಳಿ ಹೆಚ್ಚುವ ನೆವದಲಿ
ಒಳಗಿನ ಸಂಕಟಕ್ಕೇ ಬಾಯ್ಬಂದು
ದಳ ದಳ ಉದುರುವ ಅವಳ ಕಣ್ಣೀರಿಗೆ
ಈಗೀಗ ಅವನ ಕಣ್ಣಂಚಿನಲ್ಲೂ
ಕಂಡೂ ಕಾಣದಂತೆ ನೀರ ಪಸೆಯೇ?

5
ಒಲೆಯ ಕಾವಿಗೆ ಬಿಸಿಯಾಗಿ
ಕುಳಿರ್ಗಾಳಿಗೆ ತಂಪಾಗಿ
ಜೋಗುಳಕ್ಕೆ ನಿದ್ದೆಯಾಗಿ
ಪಾತ್ರೆ ಸಪ್ಪಳಕ್ಕೆ ಕಿವಿಯಾಗಿ
ಅಡುಗೆ ಘಮಕ್ಕೆ ವಾಸನೆಯಾಗಿ
ಅವಳ ತುಡುಮುಡಿಕೆಗೆ ಕಣ್ಣಾಗಿ
ಅರಳುತ್ತಿವೆ ಅವನೊಳಹೊರಗು
ಬುದ್ಧನೆನಿಸಿಕೊಂಡೂ ಮುಕ್ಕಾಗಿ
ಮಿಕ್ಕುಳಿದ ಸಾಕ್ಷಿಗಾಗಿ

6
ಹೆಣ್ಣ ಮಿಡಿತದ ಮೃತ್ತಿಕೆಯಲಿ ನೆಟ್ಟ
ಮರಗಲ್ಲ ಬುದ್ಧನಿಗೀಗ
ನೆಲದಾಳದಲ್ಲೆಲ್ಲಾ ಬೇರು

ಕೈಕಾಲು ಎದೆ ತಲೆಗಳೆಲ್ಲ ಚಿಗುರು
ಕಣಕಣದ ಚಲನೆಗೂ ಮಿಡಿವ
ಹೆಣ್ಣ ನೋವಿಗೂ ತುಡಿವ
ಅವನೀಗ ಮರ್ತ್ಯಲೋಕದ ಕೂಸು!

**– ರೂಪ ಹಾಸನ**

**'ಹೊಸತು' ಪತ್ರಿಕೆ 2012**

---

ಮರದ ಕಾಂಡ ಒಣಗಿ ಅನೇಕ ವರ್ಷಗಳ ಕಾಲ ಮಣ್ಣಿನೊಂದಿಗಿನ ಸಂಪರ್ಕದಿಂದ, ರಾಸಾಯನಿಕ ಕ್ರಿಯೆ ನಡೆದು ಖನಿಜವನ್ನು ಹೀರಿ ಮರದ ಕಾಂಡವೇ ಕಲ್ಲಾಗಿ ಪರಿವರ್ತನೆಯಾಗುವ ಸೃಷ್ಟಿ ವಿಶೇಷಕ್ಕೆ ಇಂಗ್ಲೀಷಿನಲ್ಲಿ Petrified wood ಎನ್ನುತ್ತಾರೆ. ಅದಕ್ಕೆ ಸಂವಾದಿಯಾಗಿ 'ಮರಗಲ್ಲು' ಎಂದಿಲ್ಲಿ ಬಳಸಿದ್ದೇವೆ.

## ಕಡಲು – ಕವಿತೆ

ಬದುವಿಲ್ಲದ ಗದ್ದೆಯಲ್ಲಿ
ಬೆಸ್ತರೇ ರೈತರು
ಮೀನುಗಳೇ ಫಸಲು

ಸಂಜೆ ಸೂರ್ಯನನ್ನು ನುಂಗಿದರೂ
ಸಾಯಿಸುವುದಿಲ್ಲ ಕಡಲು
ಮತ್ತೆ ಬರುವುದಿಲ್ಲವೆ ಹಗಲು?

ತೆರೆಗಳು ಅಪ್ಪಳಿಸುತ್ತಲೇ ಇವೆ
ಕರ್ತವ್ಯದೆಚ್ಚರದಂತೆ
ದಡವು ಹೃದಯ ಬಿಚ್ಚಿ
ಸ್ವಾಗತಿಸುತ್ತಲೇ ಇದೆ
ಬೆಚ್ಚಗಿನ ಪ್ರೀತಿಯಂತೆ

ನೀರು ಮೀನು ಉಪ್ಪು ಕೊಟ್ಟು
ಪಾಲಿಸುತ್ತಿರುವಾಗ ಕಡಲು
ಸುನಾಮಿಯಾದದ್ದೆ ತಡ
ಯಮನಾಗಿಬಿಟ್ಟಿತು

– ರವಿಶಂಕರ ಒಡ್ಡಂಬೆಟ್ಟು

**‘ಮಯೂರ’ 2012**

## ‘ಕಾಲ–ಪ್ರಕ್ರಿಯೆ’

ಓಡುತ್ತಲೇ ಇದ್ದಾನೆ, ಪೋರನೊಬ್ಬ
ನಿರ್ಭಿಡೆಯಿಂದ ನಡುರಸ್ತೆಯಲಿ
ಸೈಕಲ್ಲಿನ ಟೈರನ್ನು ಉರುಳಿಸುತ್ತಾ....
ಶಾಲೆಯಲ್ಲಿ, ಪಾಟಿಯನ್ನು
ಎಂಜಲು ಹಚ್ಚಿ ಅಂಗಿಗೆ ತಿಕ್ಕಿಕೊಂಡದ್ದು
ತಕ್ಷಣಕ್ಕೆ ನೆನಪಾಗುತ್ತದೆ.
ಅಗೋ... ನೋಡಿ
ಬಸ್‌ಸ್ಟ್ಯಾಂಡಿನಲಿ ಹಸಿವ ನುಂಗಿದ
ಎಳೆಜೀವಗಳು ರಚ್ಚೆಹಿಡಿದು
ಹಠ ಮಾಡುತ್ತಿವೆ ನಾವು ಬದುಕಲು!
ಈ ಬಯಲಲ್ಲಿ ಅದೆಲ್ಲಿಂದಲೋ
ತೂರಿಬರುವ ಒಂಟಿರೋದನ ತೋಡಿದಾಗ ಉಲಿಯುವಂತೆ!

ಯಾರ ಎದೆಯನ್ನೂ ಕಂಪಿಸದ
ಬಿಸಿಯುಸಿರ ಕಂಪನ!

ಈ ಮಣ್ಣು ಯಾರಿಗೆ ಪ್ರತಿಜ್ಞೆ ಮಾಡಿದೆಯೋ ಗೊತ್ತಿಲ್ಲ!
ಮಳೆ ತನ್ನ ಕರ್ತವ್ಯ ಮರೆತಾಗಲೂ,
ಬೊಗಸೆಯಷ್ಟಾದರೂ ಕಾಳನ್ನು ನೀಡಲು ಹಾತೊರೆಯುತ್ತದೆ

ಒಂದು ಸಮ ಬೇಸಿಗೆಯೊಂದು
ನದಿಗಳನ್ನೇ ಕುಡಿದು ದಾಹ ಇಂಗಿಸಿಕೊಂಡಿತು
ಕಡಲು ನದಿಗೆ ಕಾಯುವುದಿಲ್ಲ
ಉಕ್ಕುವುದನ್ನೂ ನಿಲ್ಲಿಸುವುದಿಲ್ಲ

ಕತ್ತಲು ಕೋಣೆಯೊಳಗೆ ಚರ್ರನೆ ಕಡ್ಡಿಗೀಚಿ
ಮೊಂಬತ್ತಿ ಹಚ್ಚಿದರೆ,
ಕ್ಷಣಕಾಲವಾದರೂ ಕತ್ತಲು ಮರೆಯಾಗುತ್ತದೆ
ಕತ್ತಲು ಶಾಶ್ವತವೋ ಅಥವಾ ಬೆಳಕೋ?

ಚಲಿಸುತ್ತಿರುವ ಈ ಯುಗದ ಬಸ್ಸು
ಟಪಾಲು ಒಯ್ಯುವ ಬಸ್ಸಿನಂತೆ
ತನ್ನೊಳಗೆ ಯುಗಯುಗದ ಈ ಜಗದ
ತವಕ, ತಲ್ಲಣ ನೋವು ನಲಿವನ್ನು ಹೊತ್ತು
ನಿಲ್ದಾಣವಿಲ್ಲದ ಊರಿಗೆ ಪಯಣಿಸುತ್ತಿದೆ,
ಈ ಜಗತ್ತು ಒಂದು ರಂಗಭೂಮಿಯಂತೆ!
ನಿನ್ನೆ ನಡೆದ ನಾಟಕದಲ್ಲಿ
ಅವನು,
ಅಕ್ಷರಶಃ ಕರ್ಣನಾಗಿಯೇ ನಟಿಸಿದ
ಇಂದು ಮುಂಜಾನೆ
ಭಿಕ್ಷುಕರನ್ನು ನಡೆ ಮುಂದಿನ ಮನೆಗೆಂದು ಜಬರಿಸಿದ
ಈ ಕಾಲವೇ ಹೀಗೆ
ಅದು ಹಿಂದಿನಂತಿರಲಾರದೇನೋ!
ಬದಲಾಗುವುದು ಇಲ್ಲವೆ, ಬದಲಾಯಿಸುವುದು
ಅದರ ಚಾಳಿ

**– ಸಂತೋಷ ಅಂಗಡಿ**

**'ಮಯೂರ' 2012**

## ಸತ್ಯದ ಪಣ ತೊಟ್ಟು

ಈ ಆತ್ಮಕತೆ ಬರೆಯುವ ಛಳವುಂಟಾದ
ಮಗ್ಗುಲಿಗೇ ನಾನು
ಸತ್ಯದ ಪಣ ತೊಟ್ಟೆನಾಗಿ – ಈ ತನಕದೊಂ
ದೊಂದನ್ನೂ ಹಠ ಹಿಡಿದು ತೋಡಿಕೊಂಡಿದ್ದೇನೆ
ಭಿಡೆಯಿರದೆ ಮುಚ್ಚಿದಡೆ ಚಾಚೂ
ತಪ್ಪದೆ
ಪುಳಕಗಳ ಜತೆಗೆ ಒದ್ದೆಗನಸುಗಳನ್ನೂ
ಅಷ್ಟೇ ರಸವತ್ತು ಪ್ರಣಯಗಳನ್ನೂ
ಅಪ್ರಾಪ್ತಮನಸ್ಸಿನ ಕಾಲಕ್ಷೇಪಗಳನ್ನೂ
ವಿಕ್ಷಿಪ್ತ ವಯಸ್ಸಿನ ಹಂಗಾಮೀ ವಹಿವಾಟುಗಳನ್ನೂ ಮೊಗೆ
ಮೊಗೆದು ಒಂದೊಂದೂ ನೆನಪಿಗೆ ಮಾತು ಕೊಟ್ಟಿದ್ದೇನೆ
ಕೊಟ್ಟು ನಿಷ್ಠುರವಾಗಿ ಆಡಿಕೊಳ್ಳಿರೆಂದು
ಬಿಟ್ಟಿದ್ದೇನೆ ಬಿಟ್ಟು ಕೊಟ್ಟಿದ್ದೇನೆ
ಅಂದಿನಿಂದ ಸ್ವಗತವೇ ಸದ್ದಾಗಿದೆ
ಏಕಾಂಕದೇಹಾಂತದಲ್ಲಿ ಖುದ್ದು ಆಡಿ
ಸುಮ್ಮಗೆ ಅದು ಮನಸೆಂದು ತೋರುವರಲ್ಲ
ಹಾಗೇ

ನಿಜ ಹೇಳುವುದಾದರೆ
ನನ್ನ ನಿಜಗಳ ನಿಜವನ್ನೇ ಜೀವ ಹಿಂಡಿ
ಬಸಿಯುವುದಾಗಿದೆ
ಅಷ್ಟು ಸುಲಭವೆ ಇಷ್ಟಕ್ಕೂ ಕಥನವನ್ನು ಹಠ
ಪಟ್ಟು ನೈಜಗೊಳಿಸುವುದು
ಇರಲಿ

ಈ ತನಕ ಬೆಳಕಿಗಿಂತ ನೇರ ಸಾಗಿ
ಈಗ ಗೋಡೆಯಂತೆ ಅಡ್ಡ ನಿಂತಿರುವ ನಿನ್ನೆದುರು
ಹೀಗೆ ಮಾಂದ್ಯಗೊಂಡು ಸ್ವಯಂ ಸತ್ಯವೇ
ತಡವರಿಸಿದೆ ಪರಿತಪಿಸಿದೆ
ಹೀಗೊಮ್ಮೆ ಎದುರೆಡರೀಯೆಂದು ಅಂದೇ
ಎಚ್ಚರವಿರಬೇಕಿತ್ತು ನಾನೂ

ಇಷ್ಟಿದ್ದೂ ಬಗ್ಗುಬಡಿಯದ ನಿಜವನ್ನೇ ಹೇಳುವೆ
ನನ್ನನ್ನು ನಿನ್ನ ಪಾಡಿಗೆಂದೂ ಬಿಡಬಾರದಿತ್ತು
ಬಿಟ್ಟುಕೊಟ್ಟು ಮುಂಜರಿಯಬಾರದಿತ್ತು

ಉತ್ಕಟ ಮನವರಿಕೆಯಾಗಿದೆ ಈಗೀಗ
ಸುಮ್ಮನೆ ಕಣ್ಣೊರೆಸುವ ಕಾಲಹರಣ
ಕೈ ತೊಡಗಿದೆಯೆ ಆವತ್ತೇ
ಸೊಂಟಕ್ಕೆ ಆರ್‌ಡಿಎಕ್ಸ್ ಬಿಗಿದು ಅಪ್ಪಿಕೊಂಡಿದ್ದಿದ್ದಲ್ಲಿ
ಯಾವತ್ತೋ ಮುಗಿದಿರುತ್ತಿತ್ತು
ಗ್ಯಾರಂಟಿ
ಈ ಕತೆ ಅನಾತ್ಮಗೊಳ್ಳುತ್ತಿತ್ತು

ಏನು ಮಹಾ ಅಂತ
ನಿವಾಳಿಸಿದವರೇ ನನ್ನ ಈ
ಬಯಾಗ್ರಫಿ ಬರೆದು ಉದ್ಧಾರ
ವಾಗಬಹುದಿತ್ತು

– **ನಾಗರಾಜ ವಸ್ತಾರೆ**

**'ಮಯೂರ' 2012**

# ಬರೆಯುವಾಗ

ಆ ಹಗಲು ಇರುಳು ಅಭಾಂಡವಾಗಿ
ಮೈದೆರೆದು ಮಲಗಿದ್ದಾಗ
ನಾನೇನೋ ಬರೆಯಲು ಕೂತಿದ್ದೇನೆ
ಅವುಗಳ ಕನಸ ಅಕ್ಷರದಲಿ ತುಂಬುವಂತೆ

ಮೈಯೆಲ್ಲಾ ಕಿವಿಯಾಗಿ ಕಾದಿದ್ದೇನೆ
ಒಂದೊಂದು ಪದ ಆಕಾಶದಲ್ಲಿ
ಮಿಂಚಿ ಹನಿಯಾಗಿ ಬೀಳುವುದ
ಕೇಳಲೆಂದು

ಬೇಸರದ ಗಳಿಗೆ ಬಟ್ಟಲು ಅದೋ
ಇನ್ನೇನು ತುಂಬಿ ಬಿಡುವುದು

ಕಣ ಕಣ ಕಣ ಇಳಿದು
ಇನ್ನೊಂದು ಬಟ್ಟಲಿಗೆ ಹರಿಸುವುದು

ಬರೆಯಲಾಗುತ್ತಿಲ್ಲ ಒಂದು ಸಾಲನ್ನೂ
ದಾನಕ್ಕೆ ಪಡೆದ ಮಾತಲ್ಲಿ
ಜೀವದಾನ ಪಡೆಯುವುದು ಒಮ್ಮೊಮ್ಮೆ
ಸಾವಿಗಿಂತ ಘೋರ

ಬರೆದೇನು ಏನನ್ನೋ ಮುಂದೊಮ್ಮೆ
ಭೂತ ಭವಿಷ್ಯತ್ತುಗಳ ಕೆನ್ನೆ ಸವರಿ
ನಿಧಿಯ ಒಡಲು ತೆರೆಯುವಂತೆ
ಮಂತ್ರ ಹಾಕುತ್ತೇನೆ ಕಾಯ

**– ಆರ್. ತಾರಿಣಿ ಶುಭದಾಯಿನಿ**

**'ಮಯೂರ' 2012**

# ಕೆಲವು ಪದ್ಯಗಳು

1
ಒಂದು ಹೂವು ಅರಳಿಸುವಂಥ
ಮಾತು ನನ್ನಲ್ಲಿದೆ
ಹುಡುಕುತ್ತಿರುವೆ.....

2
ನನ್ನ ಕನಸು
ಸುಟ್ಟು ಹೋಗುತ್ತಿದೆ
ಅದರ ಬೂದಿಯಿಂದ ಗುಲಾಬಿ ಬೆಳೆಯುವೆ
ನೀ ಕಿತ್ತುಕೋಬಹುದು

3
ಕಣ್ಣ ಹನಿಯ ಹಾಗೆ
ಹೊಳಪು
ಮತ್ತು
ಬಿಸಿ...
ಒಲವಿನವಳು

4
ಸಂಜೆ ನೆನಪು ತಣ್ಣನೆಯ ಹಾವು

5
ಒಂದು ವಿಷಾದದ ನಗು;
ಅತ್ತು ಸುಮ್ಮನಾದಂಥ
ಕಣ್ಣುಗಳ ಮಾನ್ಯತೆ.....

ಇದಕ್ಕಿಂತ ಹೆಚ್ಚು ಬೇಡ;
ದುಃಖದ ಸಂಗಾತಿ ನಾನು

6
ಜಾರುವ ಇಬ್ಬನಿಯ
ತನ್ನ ತುದಿಯಲಿ
ಆತುಕೊಳುವ ಎಲೆ–
ಪ್ರೀತಿರೂಪ.

7
ದಾಟಿ ಹೋಗುವ
ನನ್ನ ಕಣ್ಣ ಕಿರಣ....
ಗೊತ್ತು. ನಿನ್ನನು ಮುಟ್ಟಲಾರದು
ಆದರೆ ಹೃದಯದ ಸಣ್ಣ ದನಿ
ಹೇಗೆ ಸೋಕಿತು ನಿನ್ನನು!

8
ಈ ಜಗದ ಓಟಕ್ಕೆ
ನೆನಪು ತತ್ತರಿಸುತ್ತದೆ
ಈಗ ಕನಸಿನ ಜರೂರು

9
ವಿಚಿತ್ರ ಮನಸಲಿ...
ಒಂದು ಚುಕ್ಕಿ
ಒಂದು ಚಂದಿರ
ಮತ್ತು ಒಂದಾನೊಂದು ಕಾಲ

10
ಅಪರೂಪ ಎನಿಸಿದ್ದು
ಅನಂತ ಸುಖಕ್ಕೆ ಕಾರಣವಾಗಿ
ನಿತ್ಯ ಮಾವು
ನಿತ್ಯ ಮಲ್ಲಿಗೆ

11

ಬೆಟ್ಟ ಸಾಲ ಸುತ್ತಿ
ಬಂದ ಗಾಳಿ ವೈಯಾರವ ಈ
ಮರದ ಮೂರೆಲೆ
ಮೂದಲಿಸುತ್ತಿವೆ!

12

ನಾನು ಅಂದರೆ ಒಂದು ಮುಗಿಲು;
ನಿನ್ನ ತೋಯಿಸುವ
ನಾನು ಅಂದರೆ ಒಂದು ಬಾಗಿಲು;
ನಿನ್ನ ಮುಚ್ಚಿಕೊಳ್ಳುವ

13

ನಿನ್ನ ಚೂಪು ತುಟಿ ಮೇಲೆ
ನನ್ನೊಂದು ಅಲೆಮಾರಿ ನುಡಿ ಕೂತಂತಿದೆ
ವಿಚಾರಿಸಿಕೋ ನಲ್ಲೆ
ಬಿಡಬೇಡ!

14

ನೋವು ಮಾತ್ರವೆ ನಿಜ
ನಲಿವು ಒಮ್ಮೊಮ್ಮೆ ಸುಳ್ಳು

15

ಒಲವೆಂಬುದು ಹೂ
ಅರಳಿದಂಥ ನಿಜ
ನಮ್ಮೊಳಗಿನ ಪಸೆ
ಉದುರುವ ಎಲೆಗೆ
ಕಾಡುತ್ತದೆ
ಕೊಂಬೆಯ ಮೋಹ

17
ಬುವಿಯತ್ತಲೆ
ಬಾನಿದ
ಆಕಾಶ
ಸ್ವಪ್ನ ಬೀಜವ ಊರಿಹನು

18
ಆಕಾಶವೆಂಬ ಪುರುಷ
ಬಾಗಿಯೇ ಇದ್ದಾನೆ ಭೂರಮೆಯತ್ತ
ಎಷ್ಟು ಒಲುಮೆಯಿಂದ!

**– ಕೆ. ಪಿ. ಮೃತ್ಯುಂಜಯ**

**'ಮಯೂರ' 2012**

# ಖಬರಸ್ಥಾನ

ಕಣ್ಣುಬಿಟ್ಟಾಗ ಖಬರಸ್ಥಾನದಲ್ಲಿದ್ದೆ;
ಕಣ್ಣು ಮುಚ್ಚಿದವರೆಲ್ಲಾ ತಮ್ಮ ತಮ್ಮದೇ
ಖಬರುಗಳಲ್ಲಿ ನಿಶ್ಚಲರಾಗಿ ಮಲಗಿದ್ದರು
ನೆವ ಹೇಳದೇ, ಆಸೆ ಇಲ್ಲದೇ ದೇಹ ಕರಗುತ್ತಿದ್ದವು!

ಸಾವಿನ ಸುಳಿಗೆ ಸಿಕ್ಕ ಅಯಸ್ಕಾಂತದಂತಹ
ದೇಹಗಳು ಈಗ ಮಣ್ಣು ಮಣ್ಣು, ಆದರೂ
ತಾರಕ್ಕೇರಿವೆ ಗೋರಿಗಳು, ಕಣ್ಣು ಕುಕ್ಕುತ್ತವೆ
ಬಣ್ಣದ ಡಿಸೈನುಗಳು, ಹೂಣಿದ ದೇಹಗಳ ಮೇಲೆ
ಸ್ವರ್ಗ ಲೋಕ ಸೃಷ್ಟಿ, ಒಳಗೆ ಹುಳಗಳಿಗೆ
ಬಿರಿಯಾನಿ ಬಿಟ್ಟಿ!

ಗೋರಿಗಳ ಮೇಲೆ ಲಗೋರಿ ಆಡುತ್ತಿದೆ ತಂಗಾಳಿ,
ನಿಶ್ಶಬ್ದ ಮೌನ ಜೂಟಾಟಕ್ಕೆ ಕರೆದಂತಿದೆ
ಬಿಸಿಲಿಗೆ ಸುಟ್ಟಂತಿದೆ ಚಿರ ನೆನಪು.
ಧ್ವಜ ಸಾವಿನದು ಮತ್ತೆ ಅವತಾರ ತಾಳಿದಂತಿದೆ.
ವಲಸೆ ಹೋದ ಆತ್ಮ ಮತ್ತೆ ಬರಲಾರದಂತಿದೆ!

ಸಾವಿಗೆ ಅದೆಷ್ಟು ವಿನಯವಿದೆ, ನಿರ್ಭಾವುಕತವಿದೆ,
ನಪುಂಸಕತನವಿದೆ, ಕಟುಕತನವಿದೆ, ಶಬ್ದವಿಲ್ಲದ
ಹಠಮಾರಿತನವಿದೆ?.......
ಎಂಥಾ ಆಟವಾಡಿದವನಿಗೂ ಅಂತಿಮವಾಗಿ
ಖಬರ 'ಸ್ಥಾನ'ವಿದೆ!

ಕಣ್ಣು ಬಿಟ್ಟಾಗ ಖಬರಸ್ಥಾನದಲ್ಲಿದ್ದೆ!
ಕಣ್ಣು ಮುಚ್ಚಿದಾಗಲೂ....!!

**– ಶಿ. ಜು. ಪಾಶ**

**'ಮಯೂರ' 2012**

# ಪುಪ್ಪಿ

ಅರ್ಧಮರ್ಧ ಆರಿದ ಬೆಂಕಿಗೆ ತೂಗುಹಾಕಿದ ಕಾಫಿಕೆಟಲು ಇನ್ನೂ ಸುಡುತ್ತಿದೆ.

ಅಲ್ಲೆಲ್ಲೋ ಅಳು ಕೂಗಿನ ಹಕ್ಕಿ ಕೂಗು ಕೊಟ್ಟು
ಮಾರುತ್ತರಕ್ಕಾಗಿ ಕಾಯುತ್ತಿದೆ
ಮಲೆನಾಡಿನ ಕಾಡುಕೋಳಿ ಕುಕಿಲಿಡುವ
ಹಿಂದು ಮುಂದಾದ ಪಾದಗಳಲಿ
ನೆಲತಾಕದೆ ನೃತ್ಯಮಾಡಿದ ಪಿಶಾಚಿದಂಡು

ನಟ್ಟಿರುಳಲಿ ಒಲೆ ಉರಿಸಿ ಹೊರಟುಹೋದಂತಿದೆ
ಏಳು ಮಲೆಗಳಲ್ಲಿ ಇನ್ನೂ ಹೊಗೆ ಏಳುತ್ತಿದೆ
ಕುಪ್ಪಸ ತೊಡದ ಕಪ್ಪುಸುಂದರಿ
ನನ್ನ ಕಣ್ಣುಗಳು ಕೆಂಪಗಾಗಿವೆ
ನಿನ್ನ ಸೂಜಿಮೊಲೆಗಳೆರಡು ನನ್ನೆದೆಗೆ ಚುಚ್ಚುತ್ತಿವೆ

ಅರ್ಧ ಮುಖಕ್ಕೇ ಪರದೆ ಎಳೆವ
ನಿನ್ನ ಮುಂಗುರುಳು ಸರಿಸಿ ಮುತ್ತಿಡಲೆ?
ನಿನ್ನ ಸೊಗಸೆಲ್ಲಾ ಮಡುಗಟ್ಟಿದೆ
ಮುಖದಲ್ಲೇ... ಮೂಗಿನ ತುದಿಯಲ್ಲೇ....

ಸಿಹಿನೀರ ಝರಿಯಲಿ ಸ್ನಾನ ಮಾಡಿಸಿದವಳೇ ಆಟವಾಡಿಸಿದವಳೇ
ತಳುಕು ಹಾಕಿಕೊಂಡು ನನ್ನ ಕೂಡ ಕಾಡುಮೇಡು ಅಲೆದವಳೇ

ಏಳು ಮಲೆಗಳಲಿ ಗೇರುರಸದ ಬಟ್ಟಲಿಡಿದು ನೀನು
ನಿನ್ನ ಸೊಂಟದ ಡಾಬು ಬಳುಕುತ್ತಾ ಬರುವಾಗ
ಮರೆತ ಜಾನಪದ ಧಾಟಿಯೊಂದು ನನ್ನೊಳಗೆ
ಬೆಟ್ಟದಾ ಮಂಜಿನಂತೆ ಏಳುವುದು ಆಗ

ಕೈಯೊಳಗಿನ ಒಂದು ತುತ್ತು ಅಥವಾ ಕನಸು
ಒಬ್ಬರಿಗೊಬ್ಬರು ಹಂಚಿ ಉಣ್ಣಬಹುದು
ನನ್ನ ನೋವನೇ ನುಂಗಿ ನೀರು ಕುಡಿದವಳು ನೀನು
ನಾನು ನನ್ನ ತಂದೆಯ ತಂದೆಯ ತಂದೆಯಾಗಿರುವಾಗ
ನೀನು ನಿನ್ನ ತಾಯಿಯ ತಾಯಿಯ ತಾಯಿಯಾಗಿರುವೆ
ನನ್ನ ಕೂಟ... ಬಯಲಿಗೆ ಬಯಲೇ ಬೆನ್ನುಹತ್ತಿದ ಓಟ
ಪುವ್ವಿ.
ಒಂದು ಮೊಲೆಯನು ಅವನಿಗೆ ಮತ್ತೊಂದು ಮೊಲೆಯನು ನನಗೆ
ಹಂಚಿಕೊಟ್ಟ ಅರಿಶಿಣಗಲ್ಲದ ನಿನಗೋಸ್ಕರ ನಾವು ಕತ್ತು ನಿಮಿರಿಸಿಕೊಂಡು
ಕಾಳಗದ ಹುಂಜಗಳಾಗಿ ಕಾಲ್ಕತ್ತಿ ಬೀಸಿದ್ದೆವು.

**– ಆರೀಫ್ ರಾಜಾ**

**'ಮಯೂರ' 2012**

# ಯುಗನದ್ಧ

ನನ್ನ ಅಹಮಿಕೆಯ ಪಕಳೆಗಳೊಂದೊಂದನೇ ಕಳಚಿದ ನೀನು
ತೆರೆವ ಗುರುವೋ ಕವಿವ ಮರೆವೋ ತಿಳಿಯದಾದೆ ಸಖಿಯೇ

ಸುರಿವ ಕನಸುಗಳ ಮುಂದೆ ನನ್ನ ಬೊಗಸೆಯೊಡ್ಡಿಸಿದ ನೀನು
ಮನಸಿನ ಮುನ್ನುಡಿಯೋ ಮಾಯಾ ಕನ್ನಡಿಯೋ ಅರಿಯದಾದೆ ಸಖಿಯೇ

ಇದೆ ಇಲ್ಲವೆಂಬ ಹಣತೆಯ ಕೈಗಿಟ್ಟು ನಂದಿಸಿ ಹೋದ ನೀನು
ನಡೆವ ದಾರಿಯೋ ಸೇರುವ ಗುರಿಯೋ ಕಾಣದಾದೆ ಸಖಿಯೇ

ಅಂತರಂಗಕೆ ಕರೆದು ಕದವ ತೆರೆದು ಬಯಲುಮಂಟಪವಾದ ನೀನು
ಸೆರಗ ಮರೆಯೋ ಅಂಗೈಯ ಬೆಳಕೋ ಅರಿಯದಾದೆ ಸಖಿಯೇ

ಬೇಕು ಬೇಡಗಳ ನೋಡಿ ಮಗುವಂತೆ ರಮಿಸಿದ ನೀನು
ಪ್ರಿಯತಮೆಯೋ ಬೆನ್ನ ಕಾಯುವ ಗೆಳತಿಯೋ ತಿಳಿಯದಾದೆ ಸಖಿಯೇ

ಕಾಡುಮಲ್ಲಿಗೆ ನನ್ನ ಮುಡಿಗೇರಿಸಿ ನುಡಿಯಾಗಿಸಿದ ನೀನು
ತೊಟ್ಟು ಕಳಚಿದ ಹಣ್ಣೊ ನನ್ನೊಳಗಿನ ಕಣ್ಣೋ ಅರಿಯದಾದೆ ಸಖಿಯೇ

ಒಮ್ಮೆ ಸೋಲಿಸುವೆ ಮತ್ತೊಮ್ಮೆ ಗೆಲ್ಲಿಸುವ ಎಲ್ಲವೂ ನಿನ್ನ ಚಿತ್ತ
ನಾನು ನಿನ್ನೊಳಗೋ ನೀನು ನನ್ನೊಳಗೋ ತಿಳಿಯದಾದೆ ಸಖಿಯೇ

**– ಎಸ್. ನಟರಾಜ ಬೂದಾಳು**

**'ಮಯೂರ' 2012**

## 'ಅವಳು' ಎಂಬ ಎರಡು ಗಜಲ್‌ಗಳು

1

ಮೂಟೆ ತುಂಬ ಕನಸುಗಳ ಬಚ್ಚಿಟ್ಟುಕೊಂಡು ಬದುಕಿದವಳು
ಮನದಲ್ಲಿ ನೂರಾರು ಪುಳಕಗಳ ಬಿಂಬಿಸಿದವಳು

ಎಷ್ಟು ದೂರ ಸಾಗಿ ಬಂದಳು ನಾನಾ ಅಮಂಗಳಗಳ ದಾಟಿ
ಈಗ ಹೇಗಿದ್ದೇನೆ ಎಂದು ಕೆದಕಿ ನೋಡಿಕೊಳ್ಳುವಳು

ಎಲ್ಲ ಅನರ್ಥಗಳ ವರ್ತುಲದಲ್ಲಿ ಕಾಡಿಬೇಡಿ ಪಡೆದ
ನೆಲೆಯಲ್ಲಿ ಬಿರುಕು ಬಿಟ್ಟು ವಿಷಾದದಿಂದ ಸುಮ್ಮನೆ ನಿಂತವಳು

ದೂರ ಸಾಗಿದಂತೆಲ್ಲ ದಣಿವು ಆರಿಸಿಕೊಳ್ಳಲು ಬೊಗಸೆಗೆ
ಎಟುಕದ ಕಾಲಘಟ್ಟದಲ್ಲಿ ಏನು ಇದೆಲ್ಲ ಎಂದವಳು

ಪಾಪಿಗಳು ಹುಳುಗಳಂತೆ ಎಲ್ಲೆಲ್ಲೂ ಕಣ್ಣಿಗೆ ಕಾಣದಂತೆ
ಕೊನೆಗೂ ಅನುರಾಗ ಸಿಗುವ ತವಕದಿಂದ ತಡಕಾಡಿದವಳು

2

ಎಂಥ ಲೋಕವಿದು ಪ್ರೀತಿಯ ಧಾರೆಯೆರೆಯಲಾಗದವರು
ಹಿಂಸೆಯಲ್ಲಿ ಸುಖವ ಕಾಣುವುದ ಕಂಡು ಮರುಗಿದವಳು

ಕಂಡಕಂಡವರ ನಯನಗಳಲ್ಲಿ ಹೊಳಪ ಹುಡುಕಿದಳು
ಎಲ್ಲರ ಮುಖಗಳಲ್ಲಿ ಭೀತಿ ಮಡುಗಟ್ಟಿರುವುದು ಕಂಡಳು

ತಾಯಿಯ ಎದೆಯಾಳವ ಹೊತ್ತು ಬಹುದೂರ ಬಂದಂತೆಲ್ಲ
ಬಾಹುಗಳ ಚಾಚಿದಳು ಅಪ್ಪುಗೆಗೆ ಪರಿತಪಿಸಿದಳು

ಮಕ್ಕಳಂತೆ ಆಡಿಸಲು ಕಿಲಕಿಲನೆ ನಗುತ್ತ ಸಾಗಿದಂತೆಲ್ಲ
ಜಾರೆಯೆನ್ನುವಂತೆ ನೋಡುವ ದೃಷ್ಟಿಯ ಕೆಂಡಕ್ಕೆ ಒದ್ದಾಡಿದಳು

ನಾನು ಪೆಣ್ಣಿನ ರೂಪದಲ್ಲಿರುವ ಅಮ್ಮ ಎಂದು ಮೊರೆಯಿಡುತ್ತಲೇ
ಭಾವಲೋಕದ ನೂರಾರು ತೊಟ್ಟಿಲುಗಳ ಸೃಷ್ಟಿಸಿದಳು

ನಿದ್ರಾಹೀನರಿಗೆ ಅಮೃತಧಾರೆಯಾಗುತ್ತಾ ಸಾಗಿದಂತೆಲ್ಲ ಕ್ಷೋಭೆಯ
ಹರಡುವ ಮಂದಿಗೆಲ್ಲ ಮಾತೆಯ ಮರ್ಮವ ವಿವರಿಸುತ್ತ ಹೋದಳು

ಕಾಲ ಬಹುದೂರ ಸರಿಯುತ್ತ ಬಂತು ಭೂಮಾತೆಯಾಗುತ್ತ
ಹಸಿರು ತುಂಬಿದ ಗಿಡ ಮರಗಳ ಬೆಳೆಸುತ್ತ ಜಲಧಾರೆಗಳಿಗೆ ಜೀವವಾದಳು

**– ಶೂದ್ರ ಶ್ರೀನಿವಾಸ್**

**'ಮಯೂರ' 2012**

# ಕೋಟನ್‌ಗಳು

1
ಆಕಾಶ ಕೆಳಗಿಳಿದು
ಕಣ್ಣು ಅಂಚಿನ ಮೇಲೆ
ಒಂದು ಹನಿಯಾದಾಗ
ನಿನ್ನ ನೆನಪು

2
ಅರಿವೆ ಇಲ್ಲದ ರಾಜ
ಬಟ್ಟೆ ಉಟ್ಟರೂ ನಗ್ನ

3
ಬೆತ್ತಲೆ ಬಿದ್ದಿರುವ
ಕತ್ತಲೆಯ ತೊಡೆಗೊಮ್ಮೆ
ಚಿವುಟಿ ಚಿಮ್ಮಿಸಿ ರಕ್ತ
ಕೆಂಪು ಬೆಳಕಿನ ಮೋಡಿ
ನೋಡಿದೆನು ನಾನು

4
ಕೋಲುಮಿಂಚಿನ ಮೇಲೆ
ಕುಳಿತು ಬಂದವನಿಗೆ
ಅಂಗಿ ತೊಡಿಸುವದೆಂತು
ಹೇಳು ನೀನು

5
ಅರಮನೆಗೆ ಬಾ ಎಂದು
ಕಾಡಿಗ್ಹೊರಟನು ಜೋಗಿ
ಊರು ಬಿಟ್ಟು

6
ಮನೆಯಲ್ಲಿ ಯಾರಿಲ್ಲ
ಮನೆಗೆ ತೋರಣವಿಲ್ಲ
ಅಂಗಳಕೆ ರಂಗೋಲಿ ಶೃಂಗಾರವಿಲ್ಲ
ಜೀವ ತುಂಬಲಿ ಇಲ್ಲಿ
ಒಂದು ಕ್ಷಣ ಬಂದು ನೀ
ಹಾಡು ಹಕ್ಕಿ

**– ಚಂದ್ರಕಾಂತ ಕುಸನೂರು**

**'ಮಯೂರ' 2012**

## ಹೀಗೊಂದು ಬೆಳಗು

ಕೇಳೇ ಸಖಿ
ನಿನಗೊಂದು ಸತ್ಯವನು ಹೇಳುವೆನು
ಯಾರು ನಂಬಿದರೇನು?
ನಂಬದರೆ ಮಾಣು
ಇದು ಪ್ರಮಾಣು

ಒಂದು ದಿನ ಬೆಳಂಬೆಳಗ್ಗೆ
ಯಾರಿಲ್ಲದ ಸಮಯ
ನನ್ನೆದುರು ಬದಿರು
ಕುಣಿದು ಕುಪ್ಪಳಿಸಿ
ಹಾರಾಡಿಸಿ ಕಿಚಾಯಿಸುವ ಹಕ್ಕಿ ಬಳಗ
ಗಿಡ, ಮರ, ಬಳ್ಳಿಗೆ ಸೊಬಗಿನ ಜೋಗುಳ
ಆ ಕ್ಷಣ
ಮತ್ತೇರಿದಂತೆ ಕಾಣುವ ಸೂರ್ಯ
ಬುವಿ, ಬಾನಿಗೂ ಹೊಸ ಸುಗ್ಗಿ ಸಂಭ್ರಮ
ತಂಗಾಳಿಯಲಿ ತೇಲಿ ಬರುವ ಸೌರಭ
ಪ್ರಕೃತಿ ಪುರುಷರಲಿ
ಅದೆಂತಹ ಅವಿನಾಭಾವ ಸಂಬಂಧ
ಯಾರೂ ಎಂದು ಬಿಡಿಸದ ಅನುಬಂಧ

ಕಿರಕ್ಕೆಂದು ಬಾಗಿಲು ತೆರೆದ ಸಪ್ಪಳ
ಕಣ್ಣು ಕೀಲಿಸಿ ನೋಡಿದರೆ
ಬಾಗಿಲಲಿ ನೀನು

ಕೂಗಳತೆಯ ದೂರದಲಿ ನಾನು
ಇಬ್ಬರಲೂ ಇರಬಹುದು, ಇರಲಿಕ್ಕಿಲ್ಲ
ಸಮಾನಂತರ.

ಕೇಳೇ ಪ್ರಿಯ ಸಖಿ
ಹೇಳುವೆನು
ನಿನಗೊಂದು ಸತ್ಯ ಕತೆಯೊಂದನು
ಮುಖ ತಿರುಗಿಸಿ, ಹಾಕದಿರು ಬಾಗಿಲನು

ಅಪ್ಪನ ನಡೆ, ನುಡಿ, ಮಾತುಕತೆ
ನನಗಲ್ಲ ಮೀರಲಾಗದ ವೇದ

ಹಗಲು ಆಗಲಾರೆ ಆಲದ ಬಾವಲಿ
ಮಾರುವೇಷದಲಿ ಬಂದು – ನಿನ್ನ
ಮುಟ್ಟಲಾರೆನು ಅರೇಕ್ಷಣ

ಕೇಳೇ ಸಖಿ
ನನಗಂತೂ ನೀನು
ಮಾಯದ ಜಿಂಕೆಯೂ ಅಲ್ಲ
ಮರಣ ಮೃದಂಗವೂ ಅಲ್ಲ

ನನ್ನಂತೆ ನೀನು
ನಿನ್ನಂತೆ ನಾನು
ಅಲ್ಲ ನೀ ಬರೀ ನೆರಳು
ಅಲ್ಲ ನಾ ಬರೀ ಬೆಳಕು
ತಲೆ ಕೂದಲು ಒಂದರೊಳಗೊಂದಾಗಿ
ಕಲೆತು, ಬೆರೆತು – ಆಗಿಲ್ಲವೇ
ಸುಂದರ ಹೆರಳು
ಒಬ್ಬರ ಬೆಳಕಿನಲಿ
ಮತ್ತೊಬ್ಬರ ನೆರಳು
ಇನ್ನೊಬ್ಬರ ನೆರಳಿನಲಿ

ಮತ್ತೊಬ್ಬರ ಬೆಳಕು
ಇದು ಸಹಜ ನಿಯಮ
ಕಣ್ಣಿಟ್ಟರೆ
ಬುವಿ ಗಗನಕೂ ವ್ಯವಧಾನ
ಬೆಳಗಿನ ಬೆಳಕಿಗೂ ಬೆರಗಿನ ಸಂಭ್ರಮ

**– ಡಾ. ಸತ್ಯಾನಂದ ಪಾತ್ರೋಟ**

**'ಮಯೂರ' 2012**

# ಅವಗುಣ

ಬಾ ಗೆಳೆಯ ಬಾರೋ ದಣಿದು ಬಂದಿರುವೆ
ಒಪ್ಪವಾದ ಮುಖವೇಕೆ ಕಪ್ಪಾಗಿದೆ
ತಂಪು ಹೊತ್ತಿನಲ್ಲಿ ಬರುವುದು ಬಿಟ್ಟು
ಈ ಬಿರು ಬಿಸಿಲಿಗೆ ಮುಖವೊಡ್ಡುವುದೇ?

ತಥಾಗತನ ದಾರಿಯಲಿ ಹೆಜ್ಜೆ ತುಳಿದವ ನೀನು
ಹೊತ್ತು ಗೊತ್ತಿನ ಪರಿವೆ ಅರಿವಿನಪರಂಪಾರ
ಜೀವಧಾತುವಿನ ದ್ರವ್ಯಧಾರೆಯ ಸಾರ

ಹಳೆಯ ಹಗೆತನವೇಕೆ? ನಂಬೆನುಣಿಸು ಬೇಕೆ?
ನಾವು ಬೆಳೆಸುವ ತೋಟ ನಮ್ಮ ಆಯ್ಕೆಯ ಬಿತ್ತ
ಇರುವೆಂಬತ್ತು ಕೋಟಿಗೂ ಪ್ರೀತಿಯಕಾಸಾರ ಚಿತ್ತ

ಹೊತ್ತು ಬಂದಿರುವೆ ಹಳೆಯ ಸರಕಿನ ಮೂಟೆ
ಹೆಣಭಾರವಿರಬಹುದೆ ಹೇಳುತಿದೆ ಕಪ್ಪುಮುಖ
ನಿನ್ನ ತಲೆಭಾರಕ್ಕೆ ಯಾರೂ ಕೈಯ್ಯಾನರು ಬಂದು
ಕೈ ಮುರಿದೀತೆಂಬ ಭಯವಲ್ಲ ತಥಾಗತನ ಅಭಯ

ಅವರ ಹೆಜ್ಜೆಗೆ ಅವರೇ ದಿಕ್ಕು
ಕೈಯ ದೊಂದಿಯೇ ದಾರಿ ಬಿಕ್ಕು
ಪರುಷ ಮುಟ್ಟಿದ ಲೋಹಕ್ಕುಂಟೆ
ಚೂಲಮೂಲದ ಅವಗುಣ?

ನೀನು ಹೊತ್ತ ಭಾರದಲ್ಲಿ ನನ್ನ ಕಸದ ಋಣವಿದ್ದರೆ
ಕ್ಷಮಿಸು ಗೆಳೆಯ ಹೇಗೆ ಬಂತು ಎಲ್ಲಿ ಬಂತು
ಯಾವದಾರಿಗಡ್ಡ ಬಿತ್ತು ನನಗೆ ನಾನೇಮುಳ್ಳು ಬಿತ್ತ
ಕೈಯ್ಯಾರೆ ಕೀಳಬೇಕು ಮನವಾರೆ ಸುಡಬೇಕು

ಅಗೋ ಅಲ್ಲಿ ಆನಂದ ಕೈಬೀಸಿ ಕರೆಯುತಾನೆ
ನನ್ನ ಕೈಯ ದೊಂದಿಯಲ್ಲಿ ಕಿಟ್ಟಕಟ್ಟಿ ದಾರಿಮಬ್ಬು
ಲೋಕದಲ್ಲಿ ಎಲ್ಲ ಹೀಗೆ ಉಬ್ಬಿನಲ್ಲಿ ಮಬ್ಬು ಮಬ್ಬು
ಕಿಟ್ಟ ಕೊಡವಿ ನಡೆಯುವಾಗ ದಾರಿ ಮುಂದು ಬೆಳಗು.

**– ಎಸ್. ಜಿ. ಸಿದ್ಧರಾಮಯ್ಯ**

**'ಮಯೂರ' 2012**

# ಮುಗಿಲಿನೊಡನೆ ಮಾತುಕಥೆ

ಯಕ್ಷನೊಬ್ಬನು ವಿರಹಭಾರದಿ
ತನ್ನ ನಿಯತಿಯ ಮೀರಿ ನಡೆಯಲು
ಮಹಿಮೆಯಳಿಯಿತು ಶಾಪ ತಗುಲಿತು ನಲ್ಲೆಯಗಲಿದನು
ಜನಕ ರಾಜನ ಮಗಳು ಮಿಂದಿಹ
ನೀರಿನಲಿ ಈಜಾಡಿದನು ಆ
ರಾಮಬೆಟ್ಟದ ಗಾಢನೆರಳಿನ ತಂಪು ಕಾಡಿನಲಿ

ಬೆಟ್ಟದಂಚಿಗೆ ಬಂದು ನಿಂತನು
ಚಿತ್ತದೊಳು ಭಾಮಿನಿಯ ನೆನೆದನು
ಕಾಯ ಕಂದಿತು ಸರಿದು ಬಂದಿತು ಕೈಗಳೊಡ್ಯಾಣ
ಮಂಜು ಕವಿದಾಷಾಢ ಮಾಸದ
ಮೋಡಗಳ ಗಡಣವನೆ ಕಂಡನು
ಗುಡ್ಡದೊಡೆ ಗುದ್ದಾಡಿ ಹಾಯುವ ಆನೆಗಳ ತೆರದಿ

ಮನದೊಳಡಗಿನ ಊರನೆನಪುಗ
ಳಿದ್ದು ಬಂದವು ಕೊರಳ ಬಿಗಿಯುತ
ಒಡೆಯರೊಡೆಯನ ಶಾಪಪೀಡಿತ ಯಕ್ಷನೊಳು ಆಗ
ಮೋಡಗಳ ಓಡಾಟ ಕಂಡರೆ
ಸುಖದ ಮನವೇ ಉರಿದು ಏಳ್ವುದು
ಮೋಹಮೂಢರ ಕತೆಯನಿನ್ನ ದನರುಹಬೇಕೆನು?

ಬರುವುದಿನ್ನಿದು ಮಳೆಯಗಾಲವು
ಕಾಯಬೇಕಿದೆ ನಲ್ಲೆಯೊಲವನು
ಎಂದು ಯೋಚಿಸಿ ಯಕ್ಷಪ್ರೇಮಿಯು ತನ್ನ ಮನದೊಳಗೆ
ಬೇಡಿದನು ಆ ಮೋಡದೊಡೆಯನ

ಕೊಡಸ ಹೂ ನೈವೇದ್ಯದೊಂದಿಗೆ
ಒಲವು ಮಾತಿನೊಳೊಳಗು ಮಾಡುವ ಹಂಚಕೆಯ ಜತೆಗೆ

ಬೆಂಕಿ ಹಬೆ ಹೊಗೆ ಗಾಳಿ ನೀರುಗ
ಳೆಲ್ಲ ಕೂಡಿದ ಮೋಡ ಜಡವದು
ಜೀವಭಾವದ ಮಾತುಗಳ ತಾ ಒಯ್ಯಬಹುದೇನು?
ಇಂಥ ಪ್ರಶ್ನೆಯ ಕೇಳಿಕೊಳ್ಳದೆ
ಯಕ್ಷನರುಹಿದ ತನ್ನ ಮಾತನು
ಕಾದು ನಿಂತಿಹ ಬಯಕೆ ಮರುಳಗೆ ಜೀವಜಡವೇನು?

ಸುಪ್ರಸಿದ್ಧರ ವಂಶ ಪುಷ್ಕರ
ದೊಳಗೆ ಹುಟ್ಟಿದ ನೀನು ಬಂಧುರ
ವೇಷವೇಷಾಂತರವ ಮಾಡುವ ಚದುರ ನೀನಯ್ಯ
ವಿಧಿವಿಲಾಸದಿ ಎನ್ನ ಮಡದಿಯ
ನಗಲಿ ನಿಂದಿಹೆ ತೋರು ಕರುಣೆಯ
ಪೋಗಿ ಅವಳೆಡೆಗೆನ್ನ ಮಾತನು ಹೇಳಿಬಾರಯ್ಯ

ದಲಿತ ಮನಸಿಗೆ ಇಂಪು ನೀನೈ
ಕಾದ ಕಾಂತೆಗೆ ತಂಪು ನೀನೈ
ನನ್ನ ಸುದ್ದಿಯ ಹೊತ್ತು ಅಲ್ಲಿಗೆ ತಲುಪಿಸುವೆಯೇನು?
ನಗರಿ ಅಲಕೆಗೆ ಹೋಗಬೇಕೈ
ಶಿವನ ಚಂದಿರ ಬೆಳಕು ಹರಡಿದ ತೋಟ ಅದರೊಳಗೆ

ನೀನು ಏರಲು ಗಾಳಿಗುದುರೆಯ
ಊರು ತೊರೆದಿಹ ಜನರ ಮಡದಿಯ
ರೆಲ್ಲ ನೋಳ್ಪರು ಕೆದರು ಬೈತಿಲೆಯೆತ್ತಿ ನಿನ್ನೆಡೆಗೆ
ತಂಪು ಹನಿಗಳ ದೂತ ಕಾಣಲು
ಕಾಂತೆಯರ ಮನ ಕದಡಿ ಕುದಿವುದು
ನಲ್ಲೆಯಗಲಿಹ ಸ್ಥಿತಿಯೊಳಿರುವಾ ನನ್ನ ರೀತಿಯಲಿ

ಅಲ್ಲಿ ಕಾಣುವೆಯೆನ್ನ ಚೆಲುವೆಯ
ದಿನಗಳೆಣಿಸುತ ಕಾಲ ನೂಕುವ

ನೆನಪಿನೊಳೆ ಕಾಪಿಟ್ಟು ಕಾಯುವ ಎನ್ನ ಮಡದಿಯನು
ಹೆಣ್ಣ ಗುಂಡಿಗೆ ಹೂವಿನಂಥದು
ಶಾಖ ತಾಗಲು ಕರಗುವಂಥದು
ಆಸೆಯೊಳು ಮನವಿಟ್ಟು ಆಕೆಯ ಜೀವ ನಿಲ್ಲುವುದು

ಗಾಳಿ ಬೀಸಲಿ ಮೆಲ್ಲಮೆಲ್ಲಗೆ
ಪಯಣ ಸಾಗಲಿ ನಲ್ಲೆಯಲ್ಲಿಗೆ
ಹಾಡ ಹಾಡಲಿ ಕಾವ ಹಕ್ಕಿಯು ನಿನ್ನ ಎಡಗಡೆಗೆ
ಬೇಟದಾಟದ ಮಿಥುನ ಕ್ಷಣದಲಿ
ಬಿಳಿಯ ಹಕ್ಕಿಗಳೆಲ್ಲ ಕೂಡಲಿ
ಸೊಗಸುಗಟ್ಟಲಿ ನಿನ್ನ ಯಾತ್ರೆಯು ನಭವಿಶಾಲದಲಿ

**– ಕೆ.ವಿ. ಅಕ್ಷರ**

**ಪ್ರಜಾವಾಣಿ ದೀಪಾವಳಿ**
**ವಿಶೇಷಾಂಕ – 2012**

# ದೇಹ ಸಂಬಂಧ

ಬೆರಳತುದಿಯ ಸ್ಪರ್ಶಮಾತ್ರದಿಂದ ಹುಟ್ಟಿದ ಕಿಚ್ಚು
ನೀನು ಕಣ್ಮರೆಯಾಗಿದ್ದೇ ದಾವಾನಲದಂತೆ ಹಬ್ಬುವುದು
ಪ್ರತಿ ಕ್ಷಣ ಉರಿಸುವುದು
ಬಯಸಿ ಬೆಂಕಿಯಾಗಿ
ಊಹೆಯಲಿ ಉತ್ಕಟ ಉಕ್ಕಿ ಹರಿಯುವುದು

ನೀನು ನಿಜಕ್ಕೂ ಸಿಕ್ಕಾಗ
ಉರಿವ ಕೊಳ್ಳಿಯನ್ನು ನೀರಲ್ಲದ್ದಿದಂತೆ
ಎಲ್ಲವೂ ಕ್ಷಣಮಾತ್ರದಲ್ಲಿ ನಂದುವುದು

ಸಾವಿರ ವಿಧದಲ್ಲಿ ಬಯಸಿದ್ದು ಮುಟ್ಟಿದ್ದು ಮುತ್ತಿಕ್ಕಿದ್ದು
ಎಲ್ಲಿ ಹೋಯಿತು ನಿಜದಲ್ಲಿ?
ಲಲ್ಲೆ, ಮುದ್ದು, ಮುನ್ನಲಿವು
ಕಿವಿ ಸವರಿದ ನಾಲಿಗೆಯ ತುದಿ
ಮುಖವನ್ನು ಆವರಿಸಿದ ಹೆರಳ ಘಮ
ಅಂಗೈಗೆ ಸಿಕ್ಕ ನವಿರೆದ್ದ ಜಘನ
ಎಲ್ಲವೂ ಕಲ್ಪನೆಯಲಿ ಮಾತ್ರ ದೊರೆಯುವುದು

ದೇಹಸಂಬಂಧ ಮನಸ್ಸಲ್ಲಿ ಮಾತ್ರ ನಿಜವಾಗುವುದು

**– ವಿವೇಕ ಶಾನಭಾಗ**

**ಪ್ರಜಾವಾಣಿ ದೀಪಾವಳಿ**
**ವಿಶೇಷಾಂಕ – 2012**

# ಚಿತ್ರಬುತ್ತಿಯ ಬಿಚ್ಚು

ಕಣ್ಣೆದುರಿಗಿಟ್ಟು ಕುಳಿತ ಚಿತ್ರಬುತ್ತಿಯಲ್ಲಿ
ಯಾವ ಪುಟ ತೆರೆಯಲೆಂಬ ಆಲೋಚನೆಯಲ್ಲಿರಲು
ತಾಳೆಗರಿ ಕಟ್ಟಿನ ಮಧ್ಯೆ ದಪ್ಪ ಸೂಜಿ ತೂರಿಸಿ ತೆರೆವ
ಕೊಂಡಮಾಮ ನೆನಪಾಗಿ... ಬೆರಲ ತೂರಿಸಿ ತೆರೆದ ಪುಟದಲ್ಲಿ
ಗಂಗಭಾರತದ ಗಾರುಡಿಗ ಜೋಕಣಿ ಮುನಿಯಪ್ಪ
ಕೋನಿಗ ಹನುಮಪ್ಪ, ಗಾಯಕಿ ಮೇಲೂರಮ್ಮ
ಹುಲಿ ವೇಷದ ಪೀರುಸಾಬಿ

ಮುಂದಿನ ಪುಟದಲಾರವು? ಹಿಂದಿನ ಪುಟದಲ್ಲಿ ಆರಾರೊ?
ಮಗುಚಬೇಕು ಹಿಂದಿನದನ್ನು ಇದರ ಮುಖಕ್ಕೆ
ಭೂತವನ್ನು ವರ್ತಮಾನದ ಮುಖಕ್ಕಿಟ್ಟಂತೆ
ಮುಂದಿನದನ್ನು ತೆರೆಯಬೇಕು
ಭವಿಷತ್ಕಾಲವನ್ನು ವರ್ತಮಾನದ ಎದೆಗಿಟ್ಟಂತೆ

ಈ ಭಾವಕಲ್ಪನೆಗಳ ಕಲಸಿನಲ್ಲಿ ಈ ಚಿತ್ರಬುತ್ತಿ
ವರ್ತಮಾನವೂ ಅಲ್ಲ, ಭವಿಷ್ಯವೂ ಅಲ್ಲವೆಂಬ ಮತಿಯಲ್ಲಿ
ಪುಟ ತೆರೆ ಕ್ರಿಯೆಯಲ್ಲಿ ಪುಟದ ಮೇಲೆ
ಹಿಂದಿನ ಪುಟವಿಡುವ ಕ್ಷಣ ವರ್ತಮಾನ,
ಮುಂದಿನ ಪುಟ ತೆರೆವ ಆ ಕ್ಷಣವೂ ವರ್ತಮಾನವಾಗುವುದು
ಅನ್ನಿಸುವ ಗಳಿಗೆಯಲ್ಲಿ ತಿಳಿವು ಹೇಳಿತ್ತೆ:
ಇಡೀ ಚಿತ್ರಬುತ್ತಿಯೇ ಭೂತ
ಈ ಕಸರತ್ತು ಯಾರಿಗೆ ಅರ್ಥ?

ಬಂದ ಆಲೋಚನೆಯನ್ನು ಬಂದಲ್ಲಿಗಟ್ಟಿ
ನೋಡುತ್ತ ಕುಳಿತಾಗ ಪೀರುಸಾಬಿಯ ಕೈಯ

ಅಗ್ಗಿಷ್ಟಿಕೆಯಿಂದೇಳುತ್ತೆ ಸಾಮ್ರಾಣಿಹೊಗೆ
ಬೀಸುವ ನವಿಲುಗರಿ ಕುಚ್ಚು, ಗಮಲು
ಹಾಡುತ್ತಾನೆ:
‘ಗರೀಬೋಂಕಿ ಸುನೋ ಕುಛ್ ದೇದೋ
ಅಲ್ಲಾಕೆ ಸಾಮನೆ ಖಡೋ ಯಾರೋಂ?
ಜೋಂಕಿಣಿ ಮನೆಪ್ಪನ ದರುವು
ಗೋವ ತಿಂದೇವೊ ಊರಾಚೆ ಇದ್ದೇವೊ
ಹಂದಿಯ ತಿಂದಿರೊ ಊರೊಳಗೆ ಇದ್ದಿರೊ
ಗೋವೇನ ತಿಂತೈತೆ, ಹಂದೇನ ತಿಂತೈತೆ?

ಸಾಧಾಗುತ್ತ ಕೋನಿಗ ಹನುಮಪ್ಪ
ಉಸುರಾಡೊ ಓ ಬೊಂಬೆ
ಕುಣಿಯೋದ ಗೊತ್ತಿಲ್ಲ ಹಾಕುತ್ತಿ ತಪ್ಪೆಜ್ಜೆ
ಕುಣಿಸೋದ ಏನ್ವಲ್ಲೆ?

ಮೇಲೂರಮ್ಮ ತನಿದನಿ ತೆರೆದಳು
ದುಡಿದ ಕೈಗಳು ಮೊಕ್ಕಾವ ದ್ಯಾವುರಕ
ನೀ ತುಂಬಿ ನಿಂತೀಯೊ ಬೊಗಸೇಗೆ
ಅನ್ನಾದ ಅಗುಳೀಗೆ ಬದಲೀಗೆ
ಉಣಿಸಲೇನೊ ನಿನ್ನ ಹೆಸರನ್ನೆ ಕೂಸೀಗೆ?

ಒಂದು ಕ್ಷಣವಿದು ಸ್ಮೃತಿ ಚಿತ್ರಬುತ್ತಿ
ಮರುಕ್ಷಣವಿದು ಇತಿಹಾಸದ ಚಿತ್ರಕಥನ
ಮುಂದಿನ ಕ್ಷಣ ಬದುಕಿನ ಚಿತ್ರಗೀತೆ
ಎಲ್ಲ ಕೂಡಿಸಿದಾಗ ಸಮಾಜ ಪಠ್ಯ ಪುಸ್ತಕ

**– ಸ. ರಘುನಾಥ**

**ಪ್ರಜಾವಾಣಿ ದೀಪಾವಳಿ**
**ವಿಶೇಷಾಂಕ – 2012**

# ಅರ್ಧ ಕಿಲೋ ಸಮುದ್ರ

ಅರ್ಧ ಕಿಲೋ ಸಮುದ್ರ ನೀನು ತಂದು ಬಿಟ್ಟಿದ್ದರೆ
ಕತೆಯೇ ಬೇರೆ ಇತ್ತು.. ಅದರಲ್ಲೊಂದು ಸಣ್ಣ ಲಾಂಚು
ಬರಬಹುದಿತ್ತು... ಅದರ ಅಂಚಿನಲ್ಲಿ ಕೂತುಕೊಂಡು
ಬಯೋಡಾಟಾದ ಗಾಳಿಪಟ ಮಾಡಿ ಆಕಾಶಕ್ಕೇ ಗಾಳ
ಹಾಕಬಹುದಾಗಿತ್ತು. ನೀನು ಮನಸ್ಸು ಮಾಡಲಿಲ್ಲ.

ಸ್ವಲ್ಪ ನೀನು ನಗಲು ಯತ್ನಿಸಿದ್ದರೂ ಕತೆ ಬೇರೆ ಇತ್ತು
ಮಕ್ಕಳು ಹೀಗೆ ಹೆದರಿ ನಿನ್ನ ಕಣ್ಣು ತಪ್ಪಿಸಿಕೊಂಡು
ಬಳಸುದಾರಿಯಿಂದ ಓಡಾಡುತ್ತಿರಲಿಲ್ಲ.. ಪ್ರೇಕ್ಷಕರ
ಮಧ್ಯ ನಿನ್ನ ಮುಖ ಕಂಡು ಆಲಾಪದಲ್ಲಿರುವವರು ಕಂಗಾಲಾಗುತ್ತಿರಲಿಲ್ಲ
ಬಸ್‌ಸ್ಟಾಂಡಿನಲ್ಲಿ ಕಂಕುಳ ಕೂಸ ಒಂಟಿ ಹೆಂಗಸು ವಸಿ ಚೀಲ
ಹಿಡಿಯಣ್ಣಾ ಎಂದು ನಿನ್ನನ್ನು ಅಂಗಲಾಚಲು ಹಿಂಜರಿಯುತ್ತಿರಲಿಲ್ಲ

ನೀನು ನಡುವೆಲ್ಲೋ ನಿಂತು ಒಮ್ಮೆ ಹಿಂದೆ ನೋಡಿದ್ದರೂ ಕತೆ
ಬೇರೆಯೇ ಇತ್ತು... ನಲ್ವತ್ತು ವರ್ಷದ ಹಿಂದೆ ಶಾಲೆಯಲ್ಲೇ ನೀನು
ಮರೆತು ಬಂದಿದ್ದ ಬಣ್ಣದ ಪೆಟ್ಟಿಗೆ ಕಾಣಬಹುದಿತ್ತು...
ಹಳೆಮನೆಗಳ ಕಿಟಕಿ ಬಾಗಿಲುಗಳನ್ನು ಕಣ್ಣುಗಳಂತೆ ಕಿತ್ತು
ಶಹರದ ಸಂತೆಗೆ ಹೊರಟವರ ಅಪೂರ್ಣ ಗೊಣಗು ನಿನ್ನನ್ನು
ತಲುಪಬಹುದಿತ್ತು... ಪೋಸ್ಟರು ಹಚ್ಚುವ ಪೋರರು ಹಚ್ಚುತ್ತಿರುವಾಗಲೇ
ಗೋಡೆಗೇ ಅಂಟಿ ಹೋಗುವುದನ್ನು ನೀನು ತಡೆಯಬಹುದಿತ್ತು.

ಅದಿರಲಿ, ಈಗಲೂ ನೀನು ಚೂರು ಬೇಗ ಬಂದಿದ್ದರೂ ಕತೆಯೇ
ಬೇರೆ ಇತ್ತು... ಬಂದಿದ್ದ ಕಾಗದಗಳು ವಾರಸುದಾರರಿಲ್ಲ ಎಂದು
ಮರಳಿ ಹೋಗುತ್ತಿರಲಿಲ್ಲ.. ನಿನ್ನ ಕ್ಷಮೆ ಕೇಳಬೇಕೆಂದೇ ಕಾದಿದ್ದ
ಅಪರಿಚಿತನಿಗೆ ಹೃದಯಾಘಾತ ಆಗುತ್ತಿರಲಿಲ್ಲ... ಪುಟ್ಟ ಬಿಳಿ ಗರಿಗರಿ

ಘಾಕಿನ ಬಾಲೆಯೆದರು ಮಂಡಿಯೂರಿ ಶಾಪ ವಿಮೋಚನೆಗೆ ಕಾದವನಂತೆ ನಾನ್ಯಾರು ಹೇಳು ನೋಡೋಣಾ ಎಂದು ಕಂಗಾಲಾಗಿ ಕೇಳುವ ನಿನ್ನನ್ನು ಆಕೆ ಕೊಸರಿಕೊಳ್ಳುತ್ತ ಶೂನ್ಯಳಾಗಿ ನೋಡುತ್ತಿರಲಿಲ್ಲ. ಕವಿತೆಯಾಗಿ ಕಾಗದದಲ್ಲಿ ಏಕಾಂಗಿಯಾಗಿ ನೀನು ನಡೆಯತೊಡಗಿದ್ದೂ ಸಹ ಒಂದು ನಗ್ನ ಕ್ಷಣದಲ್ಲಿ ನಿನ್ನ ಅನುಭವಕ್ಕೂ ಬಾರದೆ ಹೋಗುತ್ತಿರಲಿಲ್ಲ.

**– ಜಯಂತ ಕಾಯ್ಕಿಣಿ**

**ಪ್ರಜಾವಾಣಿ ದೀಪಾವಳಿ**
**ವಿಶೇಷಾಂಕ – 2012**

# ಬೇರು ಬಿತ್ತವಾಗುವ ಪರಿ

ಸಾವಿರದ ಮನೆಯ ಸಾಸಿವೆಕಾಳು
ಹುಡುಕುತ್ತ ಹೊರಟಿದ್ದೆ
ತೆವಳುವ ಹುಳ ಗಹಗಹಿಸಿ ನಕ್ಕಿತು
ಹಿತ್ತಲ ಬಾಳೆಗುಬ್ಬಿ
ಈ ತೋಟ ಹೂವು ಕ್ರಿಮಿಕೀಟ ಬೇಟ ಹಾಡುಗಳ
ಈ ಕ್ಷಣ ಸುಂದರಗೊಳಿಸಿದ್ದು
ನಿಜವಾಗಿಸಿದ್ದು ಕ್ಷಣಿಕಗೊಳಿಸಿದ್ದು ಯಾವುದು?
ಉತ್ತರಿಸಿ ಮುನ್ನಡೆ ಎಂದಿತು

ಪುಟ್ಟ ಮಳೆಹನಿ ಅಣಬೆಯ ಮೇಲೆ ಜಾರುತಿತ್ತು
ಹೇಂಟೆಯ ರೆಕ್ಕೆ ಹೂಮರಿಗಳ ಮೇಲೆ ಹರಡಿತ್ತು
ಬಂಡೆ ಬಿರುಕಿನೊಳಗೆ ನಳನಳಿಸುವ ಆಲದ ಗಿಡ
ನಂದಿ ಮೇಲಣ ದೊನ್ನೆದೀಪ ಗಾಳಿಗೆ ತುಯ್ಯುತ್ತಿತ್ತು

ಆ ಸುದೀರ್ಘ ಪಯಣದಲಿ
ನಾ ಒಂಟಿಯಾಗಿರಲಿಲ್ಲ
ಕನಸು ತುಂಬಿದ ಹಾದಿಗುಂಟ
ನನ್ನ ಜೊತೆ ಚಿಟ್ಟೆಯೂ ಹಾರುತಿತ್ತು....

ಒಮ್ಮೊಮ್ಮೆ ನಾ ಮುಂದೆ
ಒಮ್ಮೊಮ್ಮೆ ಚಿಟ್ಟೆ....

ಸಾವಿರದ ಮನೆಯ ಸಾಸಿವೆಕಾಳು
ಹುಡುಕುತ್ತ ಹೊರಟಿದ್ದೆ
ನನಗೆ ಅವಸರವಿರಲಿಲ್ಲ

ಬದುಕಿನ ಗಡಿಯಾರದ ಮುಳ್ಳುಗಳು
ಉದುರಿ ಹೋಗಿದ್ದವು
ಜಾರಿಹೋದ ಕಾಲ
ಕತ್ತರಿಸಿದಷ್ಟೂ ಹೊರಬರುವ ಗಡ್ಡದ ಕೂದಲಾಗಿ
ಅಡಗಿದ ಬೇರು ಬಯಲುಗೊಳುವಾಗ
ನಡುದಾರಿಯಲ್ಲಿ ಬುದ್ಧ ಸಿಕ್ಕ
ಕಿಸಾ ಗೋತಮಿ ಸಿಕ್ಕಳು
ಕೊನೆಗೆ ಪಯಣ ಕೊನೆಗೊಳಿಸಿದವ ನೀನು...

ನಾವೀಗ ಸಾವಿರದ ಸಾಸಿವೆ ಕಾಳ ಬಿತ್ತಲು
ಹೊರಟಿದ್ದೇವೆ
ಈ ಪಯಣದಲಿ ನಾವು ಒಂಟಿಗಳಲ್ಲ
ಕಿಸಾಗೋತಮಿಯರು ದಾರಿ ತೋರುತ್ತಿದ್ದಾರೆ
ತೆವಳುವ ಹುಳ, ಹಾರುವ ಚಿಟ್ಟೆ, ಬಾಳೆಗಿಡದ ಗುಬ್ಬಿ
ಕಪ್ಪುಬಿಳಿ ಗಡ್ಡ, ಆಲದ ಚಿಗುರು, ದೊನ್ನೆದೀಪ
ಎಲ್ಲವೂ ನಮ್ಮ ಜೊತೆಗಿವೆ

ಅರೆನಿಮೀಲಿತ ನೇತ್ರ ಮುಗುಳು ನಗುತಲಿದ್ದಾನೆ...

**– ಡಾ. ಎಚ್.ಎಸ್. ಅನುಪಮಾ**

**ಪ್ರಜಾವಾಣಿ ದೀಪಾವಳಿ**
**ವಿಶೇಷಾಂಕ – 2012**

# ಧಂ ಧಮಾಕಾ ಸೇಲ್

ಸೇಲ್ ಸೇಲ್ ಸೇಲ್!
ಧಂ ಧಮಾಕಾ ಸೇಲ್!
ಕಾಸು ಕೋಡೋದೇ ಬೇಡ
ಕಾರು ಕೊಡ್ತಾರಂತೆ

ಕಂತು ಕೊಟ್ರೆ ಸಾಕು
ಮನೆ ಕೊಡ್ತಾರಂತೆ
ಚಿನ್ನ ಬೆಳ್ಳಿ ವಜ್ರ
ಸಸ್ತಾ ಸಸ್ತಾ ಅಂತೆ
ಬಟ್ಟೆ ಪಾತ್ರ ಪಡಗ
ಪೂರಾ ಡಿಸ್ಕೌಂಟಂತೆ

ಸೇಲ್ ಸೇಲ್ ಸೇಲ್!
ಧಂ ಧಮಾಕಾ ಸೇಲ್!

ಪೇಟೆ ತುಂಬಾ ಸುಗ್ಗಿ
ಏಳೋ ಬೀಳೋ ಮಗ್ಗಿ
ನಡೆ ಹಿಗ್ಗೀ ಹಿಗ್ಗೀ
ನುಡಿ ತಗ್ಗಿ ಬಗ್ಗಿ

ನೀರೂ ಸೇಲ್ ಮಣ್ಣೂ ಸೇಲ್
ಕಾಡೂ ಸೇಲ್ ನಾಡೂ ಸೇಲ್
ದೇವರು ದಿಂಡರು ಧರ್ಮ
ಶಾಸ್ತ್ರ ಪುರಾಣ ಕರ್ಮ
ಭರ್ಜರಿ ಡೀಲ್ ಹೋಲ್‌ಸೇಲ್

ಬಾಳೂ ಬದುಕು ಅಗ್ಗ
ಶಾಪಿಂಗ್ ಮಾಲೇ ಸಗ್ಗ
ಜಗ್ಗ ಮಗ್ಗ ಜಗ್ಗ
ಧಂ ಧಮಾಕಾ ಸೇಲ್
ಇದುವೇ ಆಜ್ ಕಾ ಖೇಲ್

**– ಸವಿತಾ ನಾಗಭೂಷಣ**

**'ಮಯೂರ' 2012**

# ಡಾಲಿ–ಅಕ್ಕಮಹಾದೇವಿಯ ಯುಗಳ ಗೀತೆ

ನಾನು
ಗಾಲ
ಸಾಲ್ವೆಡಾರ್ ಡಾಲಿಯ ಗೆಳತಿ;
ಬಣ್ಣದ ಹುಚ್ಚಿಗೆ
ಬೆತ್ತಲಾದ ಗೊಂಬೆ;
ಜೋಮು ಹಿಡಿದರೂ
ಮರದ ಹಡಗಾದವಳು.

ಅಂದು
ಆಕಾಶದ ನೀಲಿ
ನನ್ನ ಒಕ್ಕಣ್ಣಿಗೆ ಬಂದ ಕ್ಷಣ
ಡಾಲಿಯ ಜೊತೆಗೆ ಅಕ್ಕಮಹಾದೇವಿಯ
ಕಿರಣ:
ಆಗ ಕಣ್ಣೆದುರು
ಪೂರ್ವ–ಪಶ್ಚಿಮದ ಹಾಡು
'ಮೀಲೇ ಸುರ್ ಮೇರಾ ತುಮ್ಹಾರ'

ಭಿನ್ನ ವಿನ್ಯಾಸಗಳ ಚಿತ್ತಾರ
ವೇಷ ತೊಟ್ಟ
ಬಗೆಬಗೆಯ ಅಲಂಕಾರ
ಕಗ್ಗಂಟಲ್ಲಿ ಅಡಗಿದ ಕವಿತೆ
ಕೇಕೆ ಹಾಕಿ, ಕಿಲಕಿಲ ನಕ್ಕು
ಸಪ್ಪಗಾಗಿ
ದಿಕ್ಕೆಟ್ಟ ಕಾಲುಗಳಲ್ಲಿ
ಸಹಿ ಹಾಕಿದವು

ಹಗ್ಗದ ಜಡೆಗೆ ಬೆಳಕಿನ ಕನಸು
ಬಾಬ್‌ಕಟ್ಟಿಗೆ
ಖಾಯಂ ರೂಪದರ್ಶಿಯ ನನಸು
ಹೊರ ರೇಖೆ
ಒಳರೇಖೆಗಳ ಒಡತಿ

ಕಲಾವಿದೆಯಲ್ಲ; ಚಿತ್ರಿಸುವೆ
ಕವಿಯಲ್ಲ; ಕವಿತೆ ಬರೆವೆ;
ಊಹಿಸುವೆ ನನ್ನ ಎಡಭಾಗವನ್ನು
ತಡವರಿಸಿದ್ದು ಕಾಣದ ಹಾಗೆ
ಅರಸಿದ್ದು ಗೊತ್ತಾಗದ ಹಾಗೆ
ಗುಟ್ಟು ರಟ್ಟಾಗದ ಹಾಗೆ

**– ಅನಿತಾ ಹುಳಿಯಾರ್**

**‘ಮಯೂರ’ 2012**

# ಭೂಮಿ ನಗುತಲಿದೆ

ನೋಡಿ! ನಗುತಲಿದೆ ಭೂಮಿ
ಈ ಧಗೆಯ ದಿನಗಳಲ್ಲೂ,
ದೇವಲೋಕದ ದೇವಕನ್ನಿಕೆಯರು ಕಿತ್ತೆಸೆದ ಒಡವೆಗಳೋ ಎಂಬಂತಿವೆ ಈ
ಗಿಡಗಳ ಹೂವು
ಅದರಿಂದ ನಗುತಲಿದೆ ಸಂತಸದಿ ಈ ಭೂಮಿ.
ಮರೆಯಿರಿ ಕ್ಷಣಕಾಲ ಈ ಧಗೆಯ ಧಾವಂತ,
ಕಣ್ತುಂಬಿಸಿಕೊಳ್ಳಿ ಬಣ್ಣಗಳ ಲೋಕವ.

ಮಂಜಿನಲಿ ಮಿಂದು ಬಂದಂತಿದೆ ಹೂವೊಂದರ ಬಿಳುಪು
ಮತ್ತೊಂದು ಹೂಗೆನ್ನೆಗೆ ಯಾರೋ ಪೋರ ಅರಿಶಿನ ಬಳಿದಂತಿದೆ,
ಪುಳಕಗೊಂಡ ಹೂವೊಂದರ ಕೆನ್ನೆ ಕೆಂಪೇರಿದೆ.
ವಿವಿಧ ಬಣ್ಣಗಳಿಂದ ನವರಸಗಳ ಸೂಸುತಿವೆ,
ಎಲ್ಲವೂ ಒಂದಾಗಿ ನಗುತಲಿವೆ
ನೋಡಿ ಭೂಮಿ ನಗುತಲಿದೆ!

**– ಡಾ. ಎಚ್. ಎಸ್. ರಾಘವೇಂದ್ರರಾವ್**

**'ಮಯೂರ' 2012**

# ಸೌಂದರ್ಯದ ಶಿಲ್ಪ

ಆಕಾಶ ನೀಲಿಯಾಗಿ
ತಿಳಿಯಾಗಿ ಕಣ್ಣಗಲಕ್ಕೆಲ್ಲಾ
ಜಗದಗಲದ ತಂಪು ನೀಡುವಂತೆ

ಕಡಲು ಉಕ್ಕುಕ್ಕಿ
ನೆರೆ ತೊರೆಯ ಸಂಭ್ರಮದಲ್ಲಿ
ಬೋರ್ಗರೆಯುತ್ತಲೇ ಮುತ್ತು ರತ್ನಗಳನ್ನು
ಗರ್ಭದಲ್ಲಿ ಅಡಗಿಸಿಟ್ಟುಕೊಂಡು
ಮೌನವಾಗಿರುವಂತೆ

ಮೋಡ ಕಪ್ಪಾಗುತ್ತ ಆಗುತ್ತಾ
ಮಳೆಯ ನಿನಾದಕ್ಕೆ ಎಡೆ ಮಾಡಿಕೊಟ್ಟು
ಸುರಿ ಸುರಿದು ಹಗುರಾಗಿ
ಭೂಮಿ ಮುಗುಳ್ನಗಲು ಜೀವ ಮಿಡಿಪಿಡುವಂತೆ
ಒಬ್ಬ ನಿಜದ ನಲ್ಲ ಮಾತ್ರ
ತನ್ನ ನಲ್ಲೆಯನ್ನು ಬರೆಯಬಲ್ಲ!
ಅಂಥವನೊಬ್ಬ ಖಂಡಿತ ಈ ಭೂಮಿಯ ಮೇಲೆ
ಜನ್ಮ ತಳೆದಿದ್ದಾನೆ
ಬರೀ ಅಕ್ಷರದಲ್ಲಲ್ಲ
ಬರೀ ಬಣ್ಣದ ಚಿತ್ರದ ಗೆರೆಯಲ್ಲೂ ಅಲ್ಲ!
ಹಗಲು–ರಾತ್ರಿ ಒಂದು ನಿಮಿಷವೂ
ಪುರುಸೊತ್ತಿಲ್ಲದೆ
ಹೃದಯ ಒಂದೇ ಸಮ ಮಿಡಿಯುತ್ತಲೇ ಇರುವಂತೆ
ನನ್ನ ಪ್ರೀತಿಯೆಂಬ ಮಧುವನ್ನು ಉಣಿಸುತ್ತ

ಅವಳ ಶಿಲ್ಪವನ್ನು ಕೆತ್ತುತ್ತಾನೆ
ಅವನ ಉಸಿರಲ್ಲಿ ಉಸಿರಾಗಿರುವ
ಜೀವಕಳೆ ತುಂಬಿಕೊಂಡಿರುವ
ಅವನ ನಲ್ಲೆ ಮಾತ್ರ ಈಗ
ಪ್ರಪಂಚದ ಅತ್ಯದ್ಭುತ ಸೌಂದರ್ಯದ ಶಿಲ್ಪ!

ಇದು ಸಾಧ್ಯವಿದೆ.

**– ಜ್ಯೋತಿ ಗುರುಪ್ರಸಾದ್**

**'ಮಯೂರ' 2012**

## ಕನಸುಗಳ ಬಿತ್ತಿರಿ

ಹೊತ್ತಿ ಉರಿಯುತಿದೆ ದೇಶ
ಎಲ್ಲೋ ಏನೋ ಇದೆ ದೋಷ
ಊರು ಊರಿನಲಿ ಭುಗಿಲು

ಮನೆಯ ಗೋಡೆಯೊಳಗೆ
ಬಂಧಿ ಮಹಿಳೆಯರೇ
ಎಚ್ಚೆತ್ತು ಸಾಗಿರಿ ಇನ್ನು
ಮನೆಗೆಲಸದ ಹೊರೆ ಹೊತ್ತ ಭಗಿನಿಯರೇ
ಹೊರಗೆ ಬನ್ನಿರಿ ಇನ್ನು
ವಿದ್ಯೆ ಕಲಿಯಿರಿ, ಕಲಿಸಿರಿ

ಕತ್ತಲ ಕೂಪ ಸಾಕಿನ್ನು
ಬೆಳಕ ಬಿತ್ತಿರಿ, ಬೆಳಕ ಬೆಳೆಯಿರಿ
ಅಂಧಶ್ರದ್ಧೆ ಸಾಕಿನ್ನು
ಹೆಣ್ಣು–ಗಂಡೆಂಬ ಭೇದ ತೊಡೆದುಹಾಕಿರಿ
ಹೆಣ್ಣು ಮಗುವಿಗೆ ವಿದ್ಯೆ ಕಲಿಸಿರಿ

ಇಂಜಿನಿಯರ್, ಸಾಹಿತಿ, ವೈದ್ಯೆ, ವಿಜ್ಞಾನಿ
ನಿಮ್ಮ ಮಗಳಾಗಲಿ ದೇಶಪ್ರೇಮಿ
ಗಗನದಿ ಹಾರು ಕಾಲವಿದು
ನವವಿಜ್ಞಾನದ ಜಾಲವಿದು
ಕನಸ ಕಾಣಿರಿ, ಕನಸ ಬಿತ್ತಿರಿ

ಸಂಕೋಲೆಗಳ ತೊಡೆದು ಹಾಕಿರಿ
ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು
ಹೆಗಲಿಗೆ ಹೆಗಲು ಕೊಟ್ಟು ನಡೆಯಿರಿ
ಬದುಕ ಬವಣೆಯಲಿ ಧೃತಿಗೆಡದೆ
ಒಬ್ಬರಿಗೊಬ್ಬರು ಆಸರೆಯಾಗಿ ನಡೆಯಿರಿ

**– ಎಸ್. ಮಾಲತಿ**

**'ಮಯೂರ' 2012**

## ನಿನ್ನ ಬೆತ್ತಲೆಗೆ ನನ್ನ ದಿರಿಸು

ನೆಲ ಮುಗಿಲು ಬೆಟ್ಟ ಬಯಲು ಕಣಿವೆಗಳಿ
ನಿನ್ನ ಕಾಣುವೆ ನಾನು; ಹೊದ್ದಿರುವೆ
ಥರಾವರಿ ಬಣ್ಣಗಳ ಬೋರ್ಗರೆತವನು
ಬೆತ್ತಲಾಗಿ ಮತ್ತೆ ಧರಿಸಿ; ನಾಚಿಕೆಯೇ ಸಿಂಗಾರ

ಇಬ್ಬನಿ ಕುಡಿದ ನಿನ್ನ ಕಣ್ಣುಗಳ ಒಳಗೆ
ಚಲಿಸಿವೆ ನೂರು ನೆರಳು
ಮುತ್ತುವೆ ನೀನು, ಮೋಡವಾಗಿ
ಮಿಂಚಾಗಿ ಮಳೆಯಾಗಿ ರೆಕ್ಕೆಯಾಗಿ
ತುಟಿಗೆ ಸಿಹಿಲೇಪನ ಸವರಿ
ಹೂವಿನ ಮೃದುತ್ವದಲಿ ಇರಿದು
ಕಳೆದು ಹೋಗುವಂತೆ ನಾನು
ನಿನ್ನೊಳಗೆ ಹರ್ಷೋತ್ಕಟತೆಯಲಿ

ಕಣ್ಣ ತಪ್ಪಿಸಿ ಅಡಗುವೆ ನೀನು
ಎದ್ದು ಬರುವೆ ಮತ್ತೆ
ಜಿಗಿಯುವ ಜಲಪಾತದಲಿ
ತಟ ತಟಿಸುವ ಪಾರಿವಾಳದ ರೆಕ್ಕೆಗಳಲಿ
ನಿನ್ನ ಕಣ್ಣವೆಗಳ ಬಣ್ಣವನೆ ಊಡಿ
ಹೆಣ್ತನದ ನಿಗೂಢ ಹೊಳಪ ಧಾರೆ ಎರೆದು

ಮೈ ಮುರಿದು ನನ್ನೊಳಗೆ ಹಬ್ಬಿಕೊಳ್ಳುವ
ಬಿರುಗಾಳಿ ನೀನು; ತುಂಬಿಕೊಂಡಷ್ಟೂ ಬಿರಿಸು
ಬಿರುಮಳೆಯಾಗಿ ಅಪ್ಪುವ ದಿರಿಸು ನಾನು

**– ವಸಂತ ಬನ್ನಾಡಿ**

**‘ಮಯೂರ’ 2012**

# ಅಭಯ

ಒಪ್ಪ ಓರಣಗೊಳಿಸಿ ಸಜ್ಜುಗೊಳಿಸುವ ಸಡಗರ
ಬೇಕು ಬೇಡಗಳ ದ್ವಂದ್ವ
ಚಿತ್ರಗೋಡೆಗೊಪ್ಪುವುದೋ ಇಲ್ಲವೋ ಜಿಜ್ಞಾಸೆ
ಆದರೂ ಸದ್ಯಕ್ಕಿರಲಿ
ಕರ್ಟನ್ನು ಕಾರ್ಪೆಟ್ಟುಗಳ ಸಂಭ್ರಮ
ಅಗ್ನಿಮೂಲೆ ಕುಬೇರ ಮೂಲೆಯ ವಾಸ್ತು
ಸಮಾಧಾನ ಹಿರಿಯರಿಗೆ
ಇನ್ನೇಕೆ ತಡ, ಹಚ್ಚಿಬಿಡಿ ಮನೆಯ ದೀಪ
ಉರಿಯುತ್ತಿರಲಿ ಸದಾ ಶಾಂತ ನಿಷ್ಪಂದ

ಹರಕೆಹಾರೈಕೆಗಳ ನಡುವೆ
ಲೋಕ ಸಂಸಾದರಣುವಿನ ಚೈತ್ರಯಾತ್ರೆ
ಅಣುರೇಣುತೃಣಕಷ್ಠಕ್ಕೂ ಅಸ್ತಿತ್ವದ ಹುಡುಕಾಟದ ಸವಾಲು
ಸ್ವಸ್ಥಿತಿಯ ಪುಳಕ ಮಾತ್ರ
ಸ್ವಾಂತಸುಖಾಯದ್ದು

ಹೊಸ್ತಿಲಲ್ಲಿ ಹುಲ್ಲು ಹುಟ್ಟದ ಎಚ್ಚರ ಸದಾ
ಮನೆಯ ದೀಪ ಹೊಯ್ದಾಡುತ್ತಿದೆ ನೋಡು
ಗಾಳಿ, ಮೊದಲು ಬಾಗಿಲು ಮುಚ್ಚು
ಮನೆ ಬೆಳಗುವ ದೀಪದ ಮಲ್ಲಿಯ ಸುತ್ತ
ಹಾರಾಡುವ ಹುಳುಗಳಿಗೆ ಲೆಕ್ಕವಿಲ್ಲ
ದೀಪದ ಕೆಳಗಿನ ಒಳಗಿನ ಕತ್ತಲೆಗೆ ಯಾರಂತೆ ಹೊಣೆ?
ಆದರೂ ಅದು ಇರಬೇಕಾದ್ದೆ ಹೀಗಂತೆ
ಗೃಹಸ್ಥಧರ್ಮವೆಂದರೆ ತೇಯಬೇಕು, ಹೊರಟ ಪರಿಮಳ

ಹಬ್ಬಿ ಪಸರಿಸಬೇಕು ಮೂರು ಲೋಕಕ್ಕೂ
ಅದು ಕೊಡಬೇಕಾದ್ದು ಕೊಟ್ಟು ಮರೆಯಬೇಕಾದ್ದು
ಬದುಕು ಸಾರ್ಥಕವಂತೆ ಹೀಗೆ

ಒಪ್ಪಓರಣಗೊಂಡು ಸಜ್ಜಾದ ಮನೆಯಲ್ಲಿ
ಯಾರ ಅದೃಶ್ಯ ಹೆಜ್ಜೆ ಸಪ್ಪಳ?
ಹೋದಲ್ಲಿ ಬಂದಲ್ಲಿ
ನಿದ್ದೆ ಎಚ್ಚರಗಳಲ್ಲಿ ಸುತ್ತಿ ಸುಳಿದು
ಆತಂಕವಿರಬೇಕಾದಲ್ಲಿ ಸಂಭ್ರಮವೇಕೆ
ಕಾದಿದ್ದೆ ಇದಕ್ಕಾಗಿ ಎಂದಿನಿಂದಲೂ ಎನ್ನುವಂತೆ

ಅರಿವು ಇರವುಗಳಲ್ಲಿ ಹಬ್ಬಿ ಆವರಿಸಿದ
ನಿರಾಕಾರ ನಿರ್ಗುಣನನ್ನು ತಡಕಿ ಹುಡುಕಿ
ಹೊರದಬ್ಬಲು ಪ್ರಯತ್ನಿಸಿದ್ದೆಷ್ಟು ಬಾರಿ?

ಸಂಕಲ್ಪಬಲದ ಜಿನಮೂರ್ತಿಯೇ
ನಿರಾಕಾರ ಸಾಕಾರನಾಗಿ ನಿರ್ಗುಣ ಸಗುಣನಾಗಿ
ಸ್ವಪ್ರಕಾಶ ಮಹಾದೇವನಾಗಿ
ಬುದ್ಧಿಭಾವಗಳ ತುಂಬಿ
ಇಕೊ ಬಂದೆ ಇಗೊ ಬಂದೆ
ಫಲಿಸಿದ್ದು ಇಲ್ಲಿನದಲ್ಲ ಈಗಿನದ್ದೂ ಅಲ್ಲ
ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು

ಒಪ್ಪಓರಣದ ಮನೆಯ ದೀಪಕ್ಕೀಗ
ಎಣ್ಣೆ ಬತ್ತಿಯ ಹಂಗಿಲ್ಲದ ಆರುವ ಭಯವಿಲ್ಲದ ಮುತ್ತುವ ಹುಳುಗಳಿಲ್ಲದ
ಅಭಯದ ಅಭಯ.

**– ಎಂ. ಎಸ್. ಆಶಾದೇವಿ**

**ಪ್ರಜಾವಾಣಿ ದೀಪಾವಳಿ**
**ವಿಶೇಷಾಂಕ – 2012**

# 2013

# ಹಿಡಿಮಣ್ಣನ್ನು ಕನವರಿಸುತ್ತಿದ್ದೇನೆ

ಹಿಡಿಮಣ್ಣನ್ನು ಕನವರಿಸುತ್ತಿದ್ದೇನೆ
ಅಂತಹ ಕನವರಿಕೆಯಲ್ಲದಿದ್ದರೂ,
ಅಂತಹ ಕನಸುಗಳು ನನ್ನ ನಿದ್ದೆಯೊಳಗೆ ಬರದಿದ್ದರೂ
ಬಂಗಾರದಂತಹ ಹಿಡಿ ಮಣ್ಣಿಗಾಗಿ ಕನಸು ಕಾಣುತ್ತಿದ್ದೇನೆ
ಮಣ್ಣಿನ ಪಾದಗಳು, ಮಣ್ಣಿನ ಕೈಗಳು, ಮಣ್ಣಿನ ಊಹೆಗಳು
ಬರೀ ಮಣ್ಣಿನ ಮನುಷ್ಯನಲ್ಲವೇ?
ಮಂಕರಿಯೆಂಬ ತಟ್ಟೆಯಲ್ಲಿ ಮಣ್ಣನು ಹೊರುತ್ತಿರುವಂತಹ
ಊಹೆಯಲ್ಲಿ ಹಿಡಿಯಷ್ಟು ಮಣ್ಣಿಗಾಗಿ ಕನವರಿಸುತ್ತಿದ್ದೇನೆ
ಮಣ್ಣು ಕನಸಿಗೆ ಬರುವುದು ದೊಡ್ಡ ಆಶ್ಚರ್ಯವೇನಲ್ಲ!
ಆ ಮಣ್ಣಿನೊಳಗಿನಿಂದ ಹೊರಬಂದ ಎರಹುಳುವಿನಂತೆ
ಸಣ್ಣಗೆ ನೀರವ ನಿಶಬ್ದದಿಂದ ಒಂದೇ ರೋದನ
ಬರೀ ಮಣ್ಣಿನ ಕುರಿತಾದ ಕಣ್ಣೀರೆ!
ಸ್ನಾನವಾದ ಮೇಲೆ
ಆನೆಯೊಂದು ತನ್ನ ಸೊಂಡಿಲಿನಿಂದ ಸ್ವಲ್ಪ ಮಣ್ಣನ್ನು
ಎತ್ತಿಕೊಂಡು
ತಲೆಯ ಮೇಲೆ ಸುರಿದುಕೊಳ್ಳುವಂತೆ
ನಾನೂ ಸ್ವಲ್ಪ ಮಣ್ಣನ್ನು ತೆಗೆದುಕೊಂಡು
ಶ್ರೀಗಂಧವೆಂಬಂತೆ ನನ್ನ ಕರಿಮೈಗೆ ಬಳಿದುಕೊಳ್ಳುತ್ತೇನೆ
ಮೊದಲ ಮಳೆಯ ನಾಲ್ಕಾರು ಹನಿಗಳು ಸುರಿದಂತೆ
ನೆಲವೆಲ್ಲಾ ತಿಂಗಳುಗಳ ಮಗುವಾಗಿ
ಪುಳಕಗೊಂಡ ಮಣ್ಣಿನ ಪರಿಮಳವನ್ನು ಆಸ್ವಾದಿಸಲು
ಕೇವಲ ಮೂಗೊಂದಿದ್ದರೆ ಮಾತ್ರ ಸಾಕಾಗುವುದಿಲ್ಲ
ದೇಹವನ್ನೆಲ್ಲ ನಾಸಿಕವಾಗಿಸಿಕೊಳ್ಳಬಲ್ಲ

ಅದ್ಭುತ ಆಸೆಯಿರಬೇಕು!
ಗಿಡಕ್ಕಷ್ಟೇ ಅಲ್ಲ
ಮನುಷ್ಯನಿಗೂ ಕೂಡಾ ಕ್ಷೇತ್ರವು ಮಣ್ಣೇ,
ಒಣಗಿದ ಬೀಜವನ್ನು ಗುಂಡಿಗೆಯಲ್ಲಿ ಬಚ್ಚಿಟ್ಟುಕೊಂಡು
ಮಳೆಗೆ ಹದಗೊಂಡಂತೆ
ಚಿಗುರನ್ನು ನೆಲದ ಮೇಲೆ ತಳ್ಳುವ ಹಿಡಿಯಷ್ಟು ಮಣ್ಣನ್ನು
ಕನವರಿಸುತ್ತಿದ್ದೇನೆ

ಸಣ್ಣವನಿದ್ದಾಗ ಮನೆಯ ಹಿತ್ತಲ ಪರಂಗಿ ಮರದ ಕೆಳಗೆ
ಸವುಳು ಮಣ್ಣಿಂದ ತಲೆ ಸ್ನಾನ ಮಾಡಿದ ಮೇಲೆ
ಭೂಮಿಯೊಳಗಿಂದ ಬುಳಬುಳನೆ ಹೊರಬರುವ
ಎರೆಹುಳುವಿನಂತಹ ನೆಲವನ್ನು ಕನವರಿಸುತ್ತಿದ್ದೇನೆ

ಬೇಸಿಗೆಯಲ್ಲಿ ಒಣಗಿದ ಕರೆಯನ್ನಗೆದು
ದಂಡಗೆ ಸುರಿದ ಕಪ್ಪುಮಣ್ಣು
ಮಳೆಗಾಲದಲ್ಲಿ ನಮ್ಮ ಮೃದು ಪಾದಗಳಿಗೆ
ಮಣ್ಣಿನ ಬೂಟುಗಳಾಗಿ ಮೆತ್ತಿಕೊಳ್ಳುವ
ಹಿಡಿಯಷ್ಟು ಮಣ್ಣನ್ನು ಕನವರಿಸುತ್ತಿದ್ದೇನೆ
ಸಿಮೆಂಟು ರಸ್ತೆಗಳು
ಕಾಂಕ್ರೀಟ್ ದಂಡಕಾರಣ್ಯಗಳ ದುರಾಕ್ರಮಣಗಳ ನಡುವೆ
ಉಳಿದ ಇಷ್ಟಗಲದ ನೆಲದಲ್ಲೇ
ಮುದ್ದಾದ ಕೆಂಪು ನೈದಿಲೆಯ ಹೂವನ್ನು ಚಿಗುರಿಸುತ್ತಿರುವ
ನಿತ್ಯನೂತನ ವನಗಳನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿ
ಉಳಿದವುಗಳನ್ನು ಮುಡಿಯಷ್ಟು ವೃಕ್ಷಗಳಾಗಿಸಿ
ಮಾವಿನ ಎಲೆಗಳ ಬದಲು
ಪ್ಲಾಸ್ಟಿಕ್ ತೋರಣಗಳನ್ನು ನೇತಾಡಿಸುತ್ತಿರುವುದಕ್ಕೆ
ಬಿಕ್ಕಿ ಬಿಕ್ಕಿ ರೋದಿಸುತ್ತಿರುವ
ಹಿಡಿಯಷ್ಟು ಮಣ್ಣನ್ನು ಕನವರಿಸುತ್ತಿದ್ದೇನೆ.

ನನ್ನ ಚಿಕ್ಕಂದಿನಲ್ಲಿ ಅಮ್ಮ ಕಂಕುಳಿಗೆ
ಕೈಯಾಕಿ ನೆಲದ ಮೇಲೆ ಇಳಿಸುತ್ತಿದ್ದರೆ

ಮಣ್ಣು–ಮಣ್ಣು! ಎಂದು ಅಂಗಾಲುಗಳನ್ನು ಮೇಲೆ ಮೇಲೆ
ಮಡಿಚಿಕೊಳ್ಳುತ್ತಿದ್ದೆವು!

ಈಗ ಇಳಿಸೋಣವೆಂದರೂ
ನೆಲವಿಲ್ಲದ ಮೃದು ಪಾದಗಳನ್ನು ನೋಡಿ
ಕಣ್ಣೀರು ತುಂಬಿದ ಕಣ್ಣುಗಳೊಂದಿಗೆ ಹಿಡಿ ಮಣ್ಣನ್ನು ಕನವರಿಸುತ್ತಿದ್ದೇನೆ

ಕೆರೆಯ ಒಡಲಿನಿಂದ ಸ್ವಲ್ಪ ಜೇಡಿ ಮಣ್ಣನ್ನು ತಂದು
ಗೊಂಬೆಯ ಮಾಡಹೊರಟರೆ,
ಅದು ಗೊಂಬೆಯಾದಿದ್ದರೆ
ನಾನು ಎಲ್ಲಿ ಅಳುತ್ತೇನೊ ಎಂದು
ತನ್ನಿಂದ ತಾನೇ ಮುದ್ದಾದ ಗೊಂಬೆಯಾಗಿ ಬದಲಾದ
ನನ್ನೂರಿನ ಕೆರೆಯ ದಂಡೆಯ ಮೇಲೆ
ಬಿಕ್ಕಿ ಬಿಕ್ಕಿ ಅಳುವ
ಕಪ್ಪು ಕಪ್ಪಾದ ಮಣ್ಣನ್ನು ಕನವರಿಸುತ್ತಿದ್ದೇನೆ.

ಎಂದೋ,
ಯಾರಿಗೋ ಯಾಕೆ?
ಯಾವಾಗಲಾದರೂ ನನಗೆ ಬೇಕಾಬಹುದೆಂದು
ಹಿಡಿ ಮಣ್ಣನ್ನು ಗುಟ್ಟಾಗಿ
ಗುಂಡಿಗೆಯೊಳಗೆ ಬಚ್ಚಿಟ್ಟುಕೊಳ್ಳುತ್ತಿದ್ದೇನೆ.

**– ಲಕ್ಕೂರು ಆನಂದ**

**ಪ್ರಜಾವಾಣಿ ದೀಪಾವಳಿ**
**ವಿಶೇಷಾಂಕ – 2013**

# ಕಾಯ್ತಾ ಇದ್ದೀನಿ ಎಷ್ಟೊತ್ತಿಗೆ ಕತ್ಲೆ ಆಗುತ್ತೆ ಅಂತ

ಕಾಯ್ತಾ ಇದ್ದೀನಿ ಎಷ್ಟೊತ್ತಿಗೆ
ಬೆಳಕಾಯ್ತದೆ ಅಂತ.
ಬದ್ಲಾಗ್ಬಿಡುತ್ತೆ ನಾಳೆ ಎಲ್ಲ,
ಅಂತಂದ್ರೆ ನಾಳೆ ಅನ್ನೋದು ಬರ್ತಾನೆ
ಇಲ್ಲ ಇನ್ನೂ

ಬೆಳಕಾದ್ರೆ ನಾಳೆ ಬೆಳಗ್ಗೆ
ಸ್ನಾನ ಮಾಡ್ಬೇಕಾಗುತ್ತೆ,
ಬಟ್ಟೆ ಬದ್ಲಾಯಿಸ್ಬೇಕಾಗುತ್ತೆ,
ಕತ್ಲೇನ ಕೇಳ್ತಾಯಿದ್ದೀನಿ ಎಷ್ಟೊತ್ತಿಗೆ ಬೆಳಕಾಯ್ತದೆ ಅಂತ

ಸಿಗ್ತೀನಿ ನಾಳೆ ಪೌರಕಾರ್ಮಿಕರಿಗೆ ಅಂದಿದ್ದೆ
ಕಸಾನೆ ಇಲ್ದೆ ಹೋದ್ರೆ ನಾಳೆಗೆ
ಅವರು ರಸ್ತೇನ, ಬೀದೀನ, ಗುಡಿಸೋದೆ ಇಲ್ಲ
ಸಮಸ್ಯೇನೆ ಇರೋದಿಲ್ಲ, ಸ್ಟ್ರೈಕು ಮಾಡೋದಿಲ್ಲ
ಎಷ್ಟು ಸಂತೋಷದ ಸುದ್ದಿ ನನ್ನಂತೋರ್ಗೆ

ಕಾಯ್ತಾಯಿದ್ದೀನಿ ಎಷ್ಟೊತ್ತಿಗೆ ಬೆಳಕಾಯ್ತದೆ ಅಂತ
ಈ ಖುಷಿಗೆ ನಿದ್ದೇನೆ ಬರ್ತಾಯಿಲ್ಲ.

ಫೋನ್ ಮಾಡಿದ್ದ ಬಳ್ಳಾರಿಯ ಕೂಡ್ಲಿಗಿಯಿಂದ
ಸಂತೋಷ್ ಕುಮಾರ್
ತಾನು ದೇವದಾಸಿಯ ಮಗ,
ತಂದೆ ಕಾಲಂನಲ್ಲಿ ಹೆಸರು ತುಂಬುವ ಕಷ್ಟವಿಲ್ಲ ಸರ್ ಎಂದ.

ಸಂತೋಷನ ಹೆಸರಿನಲ್ಲಿ ಮಾತಲ್ಲಿ
ಅಕ್ಕ ಹೇಳಿದ ನೊಂದವರ ನೋವಿನ
ಬಿಸಿಕಣ್ಣೀರಿನ ತಾಪವಿತ್ತು
ಹಾಗೆ ಅಲುಗಾಡಿಸಿತ್ತು ಗಾಳಿ ಮೆಲ್ಲನೆ ನನ್ನ

ತಾಯಿ ಹೆಸರು ಬಿಟ್ಟುಹೋಗಿದೆ
ದೇವದಾಸಿಯರ ಪಟ್ಟಿಯಿಂದ
ಸೇರಿಸಬೇಕು
ನಾಳೆ ಸಿಗುವುದಾದರೆ ಸೌಧಕ್ಕೆ ಹೋಗಬೇಕೆಂದಿದ್ದ
ಕುತೂಹಲ, ತಂದೆ ಇಲ್ಲದ ಮನಗ ನೋಡಲು
ನಾವೆಲ್ಲ ತಾಯಿ ಮಕ್ಕಳೇ ಅನ್ನಿ,
ಸಂತೋಷನ ಕೈ ಕುಲುಕಿ ಅಪ್ಪಿಕೊಳ್ಳುವ ಆಸೆಯಲ್ಲಿ
ಕಾಯ್ತಾಯಿದ್ದೀನಿ ಎಷ್ಟೊತ್ತಿಗೆ ಬೆಳಕಾಯ್ತದೆ ಅಂತ.

ರಾತ್ರಿ ಎಷ್ಟೊತ್ತಿಗೆ ಹತ್ತಿತ್ತೋ ಕಣ್ಣಿಗೆ ಸಿಹಿ ನಿದ್ರೆ
ಬಾಗಿಲಿಗೆ ಪೇಪರ್ ಬಿದ್ದ ಸದ್ದು
ಕಸ ಗುಡಿಸುತ್ತಿದ್ದರು ಪೌರ ತಾಯಂದಿರು
ಹೊತ್ತು ಮೇಲೇರಿದರು ಸಂತೋಷನ ಫೋನ್ ಇಲ್ಲ
ಬಸ್ ಚಾರ್ಜಿಗೆ ದುಡ್ ಇತ್ತೋ ಇಲ್ಲವೋ

ನಾಳೆ ಎಲ್ಲಾ ಬದ್ಲಾಗ್ ಬಿಡುತ್ತೆ ಅಂತ
ನಾನು ನನ್ನ ಕಾಮ್ರೇಡ್ ಮನಸ್ಸಿಗೆ ಹೇಳಿಕೊಂಡಿದ್ದು
ಗೋಡೆಯ ನೋಡಿ, ನಕ್ಕು ಪ್ಯಾಂಟ್ ಏರಿಸಿ ಹೊರಟೆ ಕಚೇರಿಗೆ.

ಕಾಯ್ತಾಯಿದ್ದೀನಿ ಎಷ್ಟೊತ್ತಿಗೆ ಕತ್ಲೆ ಆಗುತ್ತೆ ಅಂತ

**– ಸುಬ್ಬು ಹೊಲೆಯಾರ್**

**ಪ್ರಜಾವಾಣಿ ದೀಪಾವಳಿ**
**ವಿಶೇಷಾಂಕ – 2012**

## ನವಿಲ ತತ್ತಿಯೊಳಗಿತ್ತೇ ಈಸೊಂದು ಕತ್ತಲು....

ಧೋ ಗಂಗಾ ಘಲಿರು ಘಲಿರು ಜೇನುಗನಿಗೆದ್ದ ಲಿಂಗ
ಅಲೆಯಲೆಯ ತಳದಲ್ಲಿ ತಲ್ಲಣ! ಜಲಜಲ ರಜಸ್ವಲಿಸಿ ಅಂಗಾಂಗ
ನೀರ ನಿರಿಗೆಗಳಲ್ಲಿ ಜ್ವರಪೀಡಿತ ರಂಗು ಕನಸುಗಳು ಕೋದ ಕೌದಿ
ಹಾಲುಡುಗೆಯುಡಿಸಿದ ಚಂದಿರ ಜೀವ ಹೊಕ್ಕುಳಲ್ಲೀಸುತ್ತೆ ಹಾಡು ಜೀವಾದಿ
ಮೀಯುತ್ತ ಅಲೆಗಳಲ್ಲಿ ಮೀನ ಅಧರಗಳ ಚುಂಬಕ ಕಚಗುಳಿ
ನೀಲಾಗಸದಲ್ಲಿ ಹೊಕ್ಕುಳ ಪ್ರತಿಬಿಂಬ ಸೋಜಿಗ ಗಬ್ಬದೋಕುಳಿ

ಪಾತಾಳಗಂಗೆಯ ಪಚ್ಚೆ ಕದ ಬಿಚ್ಚಿ ಚಂದ್ರ ಹೊಕ್ಕುಳು ಸೀಳಿ
ಚಂದ್ರನಿಂದಿಳಿದಿಳಿದು ಬಂದನಲ್ಲೇ ಆ ಜಡಜಾಂಬು ಮುನಿ ಅರಳಿ
ಗಾಳಿ ನಿರ್ವಾತಗಳ ಮೆಟ್ಟಿಲಿಳಿಯುತ್ತ ನೀರ್ಮಣ್ಣ ಸೋಪಾನಗಳೇರುತ್ತ
ಆ ಹರಗನ ನರನಾರಾ ಮುಡಿಗಳಿಂದ ಹಾಡುಗಬ್ಬಗಳು ತೊಟ್ಟಿಕ್ಕಿ
ಗಾಳಿಬಳ್ಳಿ ಹಬ್ಬಿ ಪುರಾಣ ಪೂರ್ವಿಕ ಧಿಗ್ಗನೆದ್ದ ಕಾರಡವಿಯ ಹೊಕ್ಕಿ
ಮಂದಾರ ಜಲಹುತ್ತ ಹುಟ್ಟಿ ಹುಣ್ಣಿಮೆ ಕಣ್ಣಲ್ಲಿ ಹೂಹೆಡೆ ತೂಗಿ
ಕೋವು ಕೋವಿನಲ್ಲೂ ಕೋದ ಕೋಟಿ ಕಥೆಗಳು ಭುಸುಗುಟ್ಟಿ ಕೋ ಕೋ!
ಬೋಂಕನೆ ಕಾಶಿ ಶಂಕಜನ್ಯ ಕಾಮಾಕ್ಷಿ ಕಣ್ಣಲ್ಲಿ ಕಾಮನವಿಲ ಕೇಕೇ
ಅಲೆಯ ತೊಟ್ಟಿಲು ಹಾಡುತ್ತೆ ಸೋಬಾನ ಸೋಸೋ ಲಿಂಗವ ಸಂತೈಸಿ
ಪುಳಕ್ಕನೆ ಮೀಂಗಥೆಗಳ ಮೇಲೇರಿ ಅದಿಸಗುತಿ ಬತ್ತಲೆಯ ಹಾಸಿ
ಆದಿಪುರಾಣದ ಹುಟ್ಟು ಈಸಿ ಆದಿಕೇಳೀಮಂಚದಲ್ಲಿ ಜೀವ ಸೂಜಿ ಹೊಕ್ಕಾಡಿ
ನವಿಲುಗಳು ನಾಂಟ್ಯವಾಡಿ ಮಿಥುನದಾಲಿಂಗ ಲಿಂಗ ಸೊಕ್ಕಿ ಮಹಾಕೂಟ!

ನವಿಲ ತತ್ತಿಗಳಲ್ಲಿ ಅಡಗಿದ್ದವೇಸೊಂದು ಲೋಕಗಳು ಚಂದ್ರ ತಾರೆ
ಸೂರ್ಯಾಕಾಶಭೂಮಿ ಆ ಧರೆ ಈ ಧರೆ ಅನಂತವೇ ಮೇರೆ
ಜಂಬು ಮರದಡಿ ಜಗವನೆತ್ತಿ ನಿಲ್ಲಿಸಿದ ಹೆಪ್ಪುಮುನಿ ಮರೆವೂ ಹೆಪ್ಪುಗಟ್ಟಿ
ಇರದ ಕಾಲಚಕ್ರವು ತಿರುತಿರುಗಿ ನೇರಳೆಯ ಕಣ್ಣಕನ್ನಡಿ ಪುಡಿಗಟ್ಟಿ

ಚೂರು ಚೂರಲ್ಲೂ ಕೋರಿದ್ದೆಲ್ಲವ ಕೋ ಎನ್ನುವ ಕಾಮಧೇನು ಹೂಂಕಾರ
ನೀರಾಸೆಗಳು ಮಣ್ಣುಮೆಟ್ಟಿ ಆಕಾಶವನೆ ಈಡಾಡುವ ಹುಚ್ಚು ಅಹಂಕಾರ
ಕತ್ತಲೆಗೇ ತುಡಿವ ಇತ್ತಲೆಯ ರವರವ ಬೆಳಕು ಜೀವಾದಿಜೀವಗಳ
ಗಾಂಧಾರಗುರುಡು!
ಕೋಟೆರಂಗಗಳು ಕಲೆತು ಮಲೆವ ಮಳೆಬಿಲ್ಲಿನ ವಂಶವಾಹಿಯಲ್ಲಿ
ಎಲ್ಲೆಲ್ಲಿ ಅಡಗಿತ್ತು ಗವಗತ್ತಲು ಗಾಢಾಂಧ ತಮಂಧ ಗರ್ವೋಗವ್ವು!

ಚಂದ್ರಗಬ್ಬದೊಳಗೆ ಜ್ವರದ ಬೇನೆ; ಬೇಯುತ್ತಿವೆ ಬೆಟ್ಟ ಹಳ್ಳ ಕೊಳ್ಳ
ಕಣ್ಣಾಲಿಗಳು ಅಂಗೈಲಿ; ಮರುಳು ಮುಕ್ಕುತ್ತಿದೆ ಕನಸದ ಗುಡ್ಡಗಳ
ದೇಸದೇಸವಾಳುವ ಪ್ರಭುವಿಗೇ ಮರುಳೆಂಬ ಗುಟ್ಟು ಚಕಚಕ ಬಿಕರಿ
ಮಾರುಕಟ್ಟೆಯ ತುಂಬಾ ಮದಿರೆ ನರಕು; ಬರದ ಪ್ಲೇಗು ಮಾರಿ ಸೋಂಕು
ಮಾರಿಯೇ ಕುಂತಿದ್ದಾಳೆ, ಏನೇನೆಲ್ಲಾ ಮಾರಿ ಗಾಳಿಮಾತು ಶೂನ್ಯವೇನಲ್ಲ
ಮನಸು ಮಸ್ತಿಷ್ಕದಲ್ಲಿ ಇಲಿಬಿಲಗಳು ತೋಡಿರಾಗವು ತಾಂಡವಿಸಿತಲ್ಲ?
ಮಣ್ಣಲ್ಲಿ ದಾಯಾದಿ ಬಿತ್ತಗಳು ಚೆಲ್ಲಿ ಅಕಟಕಟಾ ಭೂಮಿಯೇ ಕಟಕಟೇಲಿ!
ಕುಲಕರ್ಣಿಗಳ ಕಂದಾಯದ ಕಿವೀಲಿ ಮೊರೆಯುತ್ತಿದೆ ಸಿರಿಯ ಬುರುಬುರು
ನೊರೆ
ಜಾರೆ ಲಚುಮಿಯ ಗೆಜ್ಜೆ ಘಲಿರುಗಳಲ್ಲಿ ಹೂತ ಹೂ ನನ್ನಿಗಳೆಲ್ಲ ಮರೆ

ನವಿಲು ಆದಿಸಾಕ್ಷಿಗೆ ಸಿದ್ಧ; ಬಹುಬಣ್ಣಗಳೇ ಶಂಕಿತ ಏಕಾಕ್ಷಿ ಲೋಕದಲಿ
ವ್ಯಾಧಿ ನರಳುತ್ತಿದೆ; ಸಾವು ಬದುಕುತ್ತಿದೆ; ಮಾನವಿಕಕ್ಕೆ ಕಡ್ಡಾಯ ಸೂಟಿ

ಥೋ ಗಂಗಾ ಅನಂಗಲಿಂಗ ಧಾತ ಜಂಬುತಾತ ವಿಧಾತ
ಅದೇನಿದೇನಿದೇ, ನವಿಲ ತತ್ತಿಯೊಳಗಿತ್ತೇ ಈಸೊಂದು ಕತ್ತಲ ಮುಸುರೇ?!

**– ಲಕ್ಷ್ಮೀಪತಿ ಕೋಲಾರ**

# ನಮ್ಮ ರಸ್ತೆ ಅಗಲವಾಗಿ

ನಮ್ಮ ರಸ್ತೆ ಅಗಲವಾಗಿ
ಅವಳ ಹಟ್ಟಿಯೊತ್ತಿತು
ನಮ್ಮ ರಸ್ತೆ ಉಬ್ಬಿಕೊಂಡು
ಅವಳ ಹಟ್ಟಿ ತಗ್ಗಿತು
ಕಳಚಿಬಿದ್ದ ಕಾಗೆಗೂಡು
ಎಂಬಂತಾಯಿತು

ಹುಚ್ಚಿಯೋ ಭಿಕ್ಷುಕಿಯೋ
ಹೇಳಬರದು ಯಾರಿಗೂ
ಎಲ್ಲ ಸೇರಿದ್ದೊಂದಾದರೆ
ಏನು ಹೆಸರು ಕೊಡುವುದು?

ಪ್ರೇಮದಲ್ಲಿ ಕಾಮದಲ್ಲಿ
ಜೀವವೆರಡು ಕೂಡಿ
ಯಾವ ತಾಯಿ ಸಂಭ್ರಮಿಸಿದಳೊ

ಹೌದೆ? ಸಂಭ್ರಮಿಸಿದಳೆ
ಕೇಳಬಹುದು ಯಾರಿಗೆ?
ಹೊಳೆಯ ಬದಿಯ ಯಾವ ಪೊದೆಗೆ
ಜಂಗುಳಿಯ ಯಾವ ಇರಕೆ?

ಊರ ಧನಿಕ ಎಲ್ಲರನ್ನು
ದೈನೇಸಿಗಳನಾಗಿಸುವ
ಚೆಲುವೆ ಎಲ್ಲ ಹೆಂಗಳೆಯರ
ಕಳೆಗುಂದಿಸಿಬಿಡುವಳು

ಊರ ಜಾಣ ನಮ್ಮನೆಲ್ಲ
ಮಂದಮತಿಗಳೆನಿಸುವ
ಪುಣ್ಯವಂತ ನಮ್ಮನೆಲ್ಲ
ಪಾಪಿಯಾಗಿ ನಿಲಿಸುವ

ನಾವು ಚೆನ್ನ ನಾವು ಜಾಣ
ನಾವೇ ಪುಣ್ಯವಂತರು
ಎನ್ನಿಸುವುದು ಇವಳು ಎದೆ
ಹಾಗೇ ಹಾದುಹೋಗಲು

ಇಂತು ಒಂದು ಊರಿಗೆ
ಇದಕಿಂತಲೂ ದೊಡ್ಡ ಸೇವೆ
ಯಾರು ಮಾಡಬಲ್ಲರು?
ಯಾವ ಗಣ್ಯ ಮಾನ್ಯರು?
ಯಾವ ಜ್ಞಾನಿ ಸಂತರು?

– **ಎಸ್. ಮಂಜುನಾಥ್**

**'ಮಯೂರ' 2012**

## ಮನವ ಕದ್ದ ಮುಗ್ಧೆಗೆ

ನೋಡಲು ನಿನ್ನೊಮ್ಮೆ ಬಂದೆ ನಿನ್ನ ಮನೆಗೆ,
ಅದಾರು ಬಂದರು ಎನುತ ನೋಡಿದೆ ನೀನು ನನ್ನೆಡೆಗೆ,
ಮರುಕ್ಷಣದಲ್ಲಿ ಅಲ್ಲಿರಲಿಲ್ಲ ನೀನು!
ಮತ್ತೆ ಕಂಡಾಳು, ಇಣುಕಿ ನೋಡಿಯಾಳು
ನನ್ನ ಕಣ್ಣಿಗೆ ಹಬ್ಬ ಮಾಡಿಯಾಳು
ಹಂಬಲಿಸುವ ಹೃದಯಕೆ ತಂಪನೆರಾಳು
ಉಹೂಂ ಬರಲಿಲ್ಲ ನೀನು, ಕಾತರಿಸಿ ಕುಳಿತೆ ನಾನು,
ನನ್ನ ಅನ್ನಪೂರ್ಣೆಯಾಗುವ ನೀನು
ಅಂದು ಬಡಿಸಿದ ತಿಂಡಿಯೆಲ್ಲ ಜೇನು.
ಬಯಸಿದಂತೆ ಆಗಲಿಲ್ಲ ನನ್ನ ನಿನ್ನ ಕಣ್ಣುಗಗಳ ಮಿಲನ
ಆಗದೇ ಇರಲಿಲ್ಲ, ಎರಡು ಹೃದಯಗಳ ಸ್ಪಂದನ
ನಿನ್ನೊಡನೆ ಮಾತನಾಡುವ ಬಯಕೆ
ಬಯಕೆಯಾಗಿಯೇ ಉಳಿಯಿತು!
ನಿನ್ನ ನಲ್ನುಡಿ, ಹೂ ನಗೆ, ಸಾಮೀಪ್ಯ
ಸವಿಯುವ ದಿನ ಬಂದೀತು ಎಂದು?
ಕೇಳಬೇಕೆಂದು ಕೊಂಡರೂ
ಕೇಳದೆಯೇ ಬಂದು ಬಿಟ್ಟೆ!
ಇದಕ್ಕೆ ರಾಜೇಶ್ವರಿಯ ಉತ್ತರ, ಆಕೆಯಿಂದ ನಾನು ಪಡೆದ ಮೊದಲ ಪತ್ರ
ಹೀಗಿತ್ತು!

ಪ್ರೀತಿಯ... ಗೆ

ನಿನ್ನ ಪ್ರೇಮಪೂರ್ವಕವಾದ ಕವಿತೆಗಳನ್ನು ಓದಿ ನಿಜವಾಗಲೂ ಮುಗ್ಧಳಾಗಿದ್ದೇನೆ, ಈ ಕವಿತೆಗಳು ಕೆ.ಎಸ್.ನ ಅವರ 'ಮೈಸೂರ ಮಲ್ಲಿಗೆ'ಯನ್ನು ಜ್ಞಾಪಕಕ್ಕೆ ತರುತ್ತವೆ.

ನಿನ್ನ ಪತ್ರಕ್ಕೆ ಯಾವ ರೀತಿ ಪ್ರತಿಕ್ರಿಯಿಸಬೇಕೋ ನನಗೆ ತಿಳಿದಿಲ್ಲ. ಏನೇನೋ ಕಲ್ಪಿಸಿಕೊಂಡಿರುವ ನಿಮಗೆ ನನ್ನ ಈ ಪತ್ರ ಸಪ್ಪೆಯಾಗಿ ಕಾಣಬಹುದು. ನನಗೆ ಬರೆಯಲು ಸಂಕೋಚ ಮತ್ತು ನಾಚಿಕೆ ಅಡ್ಡಗಟ್ಟಿವೆ.

ಕಳೆದ ಸಲ, ನೀವು ಬಂದಾಗ ನಿಮ್ಮೆದುರು ಬರುವುದಕ್ಕೆ ನನಗೆ ತುಂಬಾ ನಾಚಿಕೆಯಾಯಿತು ಏಕೆ ಗೊತ್ತೇ ನಿಮ್ಮ ಕವಿತೆಗಳೇ ಕಾರಣ.

ಸದಾ ನಿಮ್ಮ ಧ್ಯಾನದಲ್ಲಿರುವ,
ತಮ್ಮ ಪ್ರೀತಿಯ ರಾಜೇಶ್ವರಿ

**– ಆರತಿ ಎಚ್. ಎನ್.**

**'ಮಯೂರ' 2013**

## ಪ್ರಳಯ ಬಂತೇ?

ಬಂತು! ಬಂತೇ? ಬಂತು! ಬಂತೇ?...
'ಪ್ರಳಯ' ಬಂತೇ ಗೆಳೆಯರೇ?....
ಬಂತು ಮನಸಿಗೆ, ಕಂತೊ ಬುದ್ಧಿಗೆ
ಜಂತು ಬಾಳಿಗೆ, ಅಲ್ಲವೇ?...

'ಸುಣ್ಣಕಣ್ಣಿಗೆ' ಇರಲಿ ಪ್ರಳಯವು
ಬೆಣ್ಣೆಕೂದಲ ತಂತ್ರಕೂ
ಗಿರಿವಿ ಬಾಳಿಗೆ
ಇಲ್ಲ ನಾಚಿಕೆ, ಸುದ್ದಿಜಾಲಕೂ ಬಂತೆಲೊ!

ಕಳ್ಳಕಾಂಚನ ದೇವರಾಶ್ರಯ
ಹೊಲಸು ನಾರುವ ಕಚ್ಚೆಗೂ
ಇರಲಿ ಪ್ರಳಯವು ಹೊಟ್ಟೆಕಿಚ್ಚಿಗೆ
ಕೆಂಪು ಮಚ್ಚೆಗೆ ನಿಚ್ಚವೂ.

ಪ್ರಳಯವೆನ್ನಿರೊ ನುಂಗೋ ಬಾಳಿಗೆ
ಪರಡಿಯೊಳಗಿನ ತೂಕಕೆ;
ಪ್ರಳಯವೆನ್ನಿರೊ ಪದಕ ತಿನ್ನುವ
ಪರದೆ ಹಿಂದಿನ ಆಟಕೆ!

ವಜ್ರಮುಷ್ಟಿಗೆ ಪ್ರಳಯಬೇಕೈ
ಕಪ್ಪು ಜೇಬಿಗೂ ಬೇಕಲೊ!
ದುಡಿತ ಮರೆತೂ 'ದುಡ್ಡು'
ಗಳಿಸುವ ಸ್ವಿಸ್ ಬ್ಯಾಂಕಿನ ದೋಸ್ತಗೂ

ಪ್ರಳಯ ಬೇಕಿದೆ 'ದ್ವೀಪ'
ಕೊಳ್ಳುವ ಭೂಪ ಸಂತತಿ ಅಳಿವಿಗೆ
ಪ್ರಳಯ ಬೇಕಿದೆ ನೀಚ
ಬುದ್ಧಿಯ, ನಾಚಿಕಿಲ್ಲದ ಬಾಳಿಗೆ

ಆಳುವರಸವ 'ಪ್ರಳಯ'ನಾದರೆ
ಯಾವ ದೇವನು ಕಾವನೋ!
ಪ್ರಳಯ ಒಳಗಿದೆ, ಪ್ರಳಯ ಬಳಿಗಿದೆ
ಪ್ರಳಯ ಬಂತೇ ಗೆಳೆಯರೇ?

**– ವಿಷ್ಣು ನಾಯ್ಕ**

**'ಮಯೂರ' 2013**

## ಈಜ ಬೇಕು ನೀಳ ಬೆನ್ನಲ್ಲಿ

1

ನಿನ್ನ ನೀಳ ಬೆನ್ನಲ್ಲಿ ಈಜಬೇಕು
ಮೈಚಳಿ ಬಿಟ್ಟು ಆಳಕ್ಕೆ ಕುಸಿಯುತ
ಮುತ್ತು, ಹವಳ ನಿಧಿ ಹುಡುಕುವಂತೆ
ಭೋರ್ಗರೆವ ಯವ್ವನಕ್ಕೆ ಸಿಲುಕಿ ನಲುಗಲು

2

ನಿನ್ನ ನೀಳ ಬೆನ್ನಲ್ಲಿ ಗಾಳಹಾಕಿ ಕೂರಬೇಕು
ಹೊಸ ನೀರ ಸ್ರವಿಸು, ಹಳೆ ಮೀನು ಸಿಗಲಿ
ಹೊಕ್ಕಳು ಸುಳಿ ಸೆಡುವುಗಳಲ್ಲಿ ಗುದ್ದಾಡಲು
ಆಳ ಸೆಳೆತ ಏರಿಳಿತಗಳಿಗೆ ಸಿಕ್ಕಿ ಸೋಲೊಪ್ಪಲು

3

ನಿನ್ನ ನೀಳ ಬೆನ್ನ ಸೌಂದರ್ಯಕ್ಕೆ ಬೊಗಸೆಯೊಡ್ಡಬೇಕು
ಪ್ರತಿ ಋತುವಿನಲ್ಲೂ ದಂಡೆಯಲ್ಲಿ ಕಾಯುತ
ಬೇಸಿಗೆ ಧಗೆಯಲ್ಲಿ ನಿನ್ನೊಡನೆ ಬೆವರಲು
ಚಳಿಯಲ್ಲಿ ಶಿಥಲೆ ತಳಕ್ಕೆ ಬಿಸಿಹರಿಸಲು
ತೂರಿ ಹರಿವವಳಿಗೆ ನಡು ಬಂಡೆಯಾಗಲು

4

ಕೊನೆಗೊಂದು ಬಾರಿ ಬಿಟ್ಟುಕೊಳ್ಳೆ
ನಿನ್ನದೇ ನೀಳ ಬೆನ್ನು ಬೇಕು
ಅಪ್ಪನ ನೆನಪಿಗೆ ಕೂಸುಮರಿ ಮಲಗಲಾದರು

ಹರವು ಸ್ಫೂರ್ತಿಗೌಡ
ಅವಧಿ–2013

# ಸಹೃದಯರ ಸಹಜ ಕೃತಿ ಪರೀಕ್ಷೆ

1

ಸಂಜೆ ಆರಕ್ಕೆ ಸರಿಯಾಗಿ ಆಕೆ
ನೆಲಕ್ಕಿಳಿದ ನಕ್ಷತ್ರದ ಹಾಗೆ
ಕಿಚ್ಚಿಲ್ಲದ ಬೇಗೆಯಲಿ ಬಿರಿದ ಕೆಂಗುಲಾಬಿಯ ಹಾಗೆ
ವೇದಿಕೆಯ ಮೆಟ್ಟಿಲೇರಿದ ಗಳಿಗೆ
ಮಿಂಚಿನ ಕೆಂಪುರೇಶಿಮೆ ನಿತಂಬದ ಸಂಚಿಗೆ
ಸಹೃದಯರ ಅಂಗಾಂಗ ಮೆಚ್ಚಿ ಅಹುದಹುದೆಂದಿತ್ತು
ಈ ಮಹಿಳೆ ನುಡಿದರೆ ಮುತ್ತಿನ ಹಾರ ಖಾತ್ರಿಯೆಂಬ
ನಂಬಿಕೆ ಮಹನೀಯರಲ್ಲಿತ್ತು
ಸಹೃದಯರ ಸ್ಫಟಿಕದ ಶಲಾಕೆಯೊಳಗಾಗಲೇ
ಮಾಣಿಕ್ಯದ ದೀಪ್ತಿ ಝಗ್ಗನೆ ಬೆಳಗಿದಂತಿತ್ತು

ಇನ್ನೇನಿದ್ದರೂ
ಕವಿಕೃತಿಯ ಬಿಡಿ ಭಾಗಗಳ ಪರೀಕ್ಷೆ ಮಾತ್ರ
ಅದೇನಿದ್ದರೂ
ಕೃತಿಯ ಆಕೃತಿಯ ನಿಕಟ ಪರೀಕ್ಷೆಯ ನಂತರ;
ಇಷ್ಟಾರ್ಥ ದೇವತೆಯ ಪ್ರತಿಷ್ಠಾಪನೆ ಆನಂತರ.

2

ಹೇಳಿಕೇಳಿ ಕೃತಿ ಅಲಕ್ಷಿತ ವರ್ಗಕ್ಕೆ ಸೇರಿದ್ದರಿಂದ
ನಿಕಟಪರೀಕ್ಷೆ ತೀರಾ ಕಟುವಾಗುವಂತಿರಲಿಲ್ಲ.
ಹೀಗಾಗಿ ಕೃತಿಪರೀಕ್ಷೆ ಅಷ್ಟೇನೂ ಕಷ್ಟವಿರಲಿಲ್ಲ.

ಸಹೃದಯರ ಪ್ರತಿಕ್ರಿಯೆಗಳು ಕೂಡ ಅಸಹಜವಿರಲಿಲ್ಲ.
'ಮೇಡಂ, ಆ ಗಂಡುಕುಲದ ಬಗ್ಗೆ
ನಿಮ್ಮ ಬೆಳಕಿ ನಮ್ಮನ್ನು ಸುಡುವಂತಿತ್ತು!'
ನಿಮ್ಮ ವ್ಯಕ್ತಿತ್ವಕ್ಕೆ ಹತ್ತಿರವಿತ್ತು'
'ಎಲೆ ಗಂಡೆ! ನಾನೆಂದರೆ ನಿನಗೆ ಮೈತೊಗಲು ಮಾತ್ರ!
ಎಂಬ ಸಿಡಿಮಿಡಿ ನಮ್ಮನ್ನು ಬಡಿದೆಬ್ಬಿಸುವಂತಿತ್ತು'
'ಓದುವಾಗಲಂತೂ ಆ ನಿಮ್ಮ ಸಂಕೇತಗಳು
ನಿಜಕ್ಕೂ ಮೋಹಕವಾಗಿದ್ದವು.
ಆ ಸಂಕೇತಗಳ ನಿಗೂಢಾರ್ಥಗಳು ಮಾತ್ರ
ಕಣ್ಣಾಮುಚ್ಚಾಲೆ ಆಡುತ್ತಲೇ ಇದ್ದವು'

ಇಷ್ಟಕ್ಕೂ ಅರ್ಥವೆನ್ನುವುದು
ನೆಲದ ಮರೆಯ ನಿಧಾನದಂತಲ್ಲವೆ?
ಇಳೆಯೊಳಗಿನ ಅರ್ಥದ ಸಿರಿ
ಸಿಕ್ಕವರ ಸೀರುಂಡೆಯಲ್ಲವೆ?
ಅದು ಕೆಳಕ್ಕೆ ತಳಕ್ಕೆ ಗುದ್ದಲಿಯೊತ್ತಿ ಕುಕ್ಕಿದರೆ
ಕಂಡೀತು ಎಂದು ಅಡಿಗರು ನುಡಿದಿಲ್ಲವೆ?

3

ಅಂತೂ ಸಹೃದಯರ ಸಹಜ ಪ್ರತಿಕ್ರಿಯೆಗಳು
ಅವಳ ಎದೆ ಮುಟ್ಟುವಂತಿದ್ದವು;
ಅವಳ ಮನದೊಳಗಿನ ಕಿಚ್ಚಿನ
ಪ್ರದರ್ಶನಕಾತರಕ್ಕೆ ಈ ಮೇಲ್ಮೈದರ್ಶನಗಳು
ಹಿತವಾಗಿ ಜೊತೆಯಾಗಿದ್ದವು
ಮತ್ತೊಂದು ಕವಿತೆಯ ಮೊಟ್ಟೆಯಿಡಲು ಬಸಿರು ಹದವಾದಂತಿತ್ತು!

'ಕವಿಸಂಜೆ'ಯ ಮಬ್ಬು ಮೀರಿ ಕತ್ತಲು ಕವಿಯತೊಡಗಿ
ಕಾಲೆಳೆದು ಮನೆಯತ್ತ ಹೊರಟ ಕವಯಿತ್ರಿಗೆ
ಆ 'ಮೇಲ್‌ಶವನಿಸ್ಟ್ ಪಿಗ್ಗು'ಗಳ
ಇನಸ್ಟಂಟ್ ರಿಯಾಕ್ಷನ್ನುಗಳ ವರಸೆ ಗೊತ್ತಿತ್ತು;
ಈ ಮಹನೀಯರ 'ನಿತಂಬತಾಡನ ವಿಮರ್ಶೆ'ಯ
ಸದುದ್ದೇಶ ಕೂಡ ಚಿರಪರಿಚಿತವಿತ್ತು!

ಇಷ್ಟೆಲ್ಲದರ ನಡುವೆ,
ಮನೆಯ ನಿತ್ಯದ ಜಡವರಸೆಗಳು ನೆನಪಾದ ತಕ್ಷಣ;
ಆ ಮುಸ್ಸಂಜೆಯ ಪ್ರತಿಕ್ರಿಯೆಗಳಲ್ಲಿ
ನಿಜಕ್ಕೂ ಯಾವುದು ಕ್ರಿಯಾಶೀಲವಾಗಿತ್ತು
ರಾತ್ರಿಯ ಕನಸಿಗೆ ಯಾವುದು ನುಸುಳಬಹುದು
ಎಂಬ ಅಸಲಿ ಹುಡುಕಾಟವೊಂದು
ಆಳದಲ್ಲೆಲ್ಲೋ ಮೆಲ್ಲಗೆ ಟಿಂವ್‌ಗುಟ್ಟತೊಡಗಿತು

**– ಡಾ. ನಟರಾಜ ಹುಳಿಯಾರ್**

**'ಮಯೂರ' 2013**

# ಅಧಿಕಾರಿ

ಹೊಟ್ಟೆ ಇರಲೇಬೇಕು
ಇಷ್ಟಾದರೂ
ಮುಖ ಮುಪ್ಪಾವಸ್ಥೆ
ತಲೆಗೆ ಬಣ್ಣ
ಸದಾ ತಿರುಗುವ ಫ್ಯಾನು
ಜೀವವಿಲ್ಲದ ಬೆಳಕು
ಹರೆಯದ ಖುರ್ಚಿಗೆ
ಮುದುಕು ಗೋನು

ಕುಣಿವ ನವಿಲೇ
ಹಸಿ ಮಣ್ಣೆ ಕಲ್ಲು ಬಿಸಿಲೆ
ಭೋರ್ಗರೆವ ಗಾಳಿಯೇ
ಸುರಿವ ಮಳೆಯೇ
ಬಿಸಾಕಿ ಬಿಟ್ಟಿದ್ದೀರಲ್ಲಾ ಇವನ
ಇಲ್ಲಿ ಖಾಲಿ ಖಾಲಿ

ಕಡತ, ಕಾರು
ಫ್ಯಾನು ಫೋನು
ಮುರುಕು ಮೀಸೆ
ಇಷ್ಟೇ ಮಾತು
ಕಚೇರಿ ಹತ್ತುವಾಗ ಬಿಪಿ
ಇಳಿಯುವಾಗ ಶುಗರು
ಮಡಚಿದ ಇಸ್ತ್ರೀ ಗೆರೆಯೇ
ಸದಾ ಇವನ ಸಂಗಾತಿ

ರಸ್ತೆಯಲಿ ತಿರುಗುವವನಲ್ಲ
ಕಂಡವರ ಜೊತೆ ಮಾತಿಲ್ಲ
ನಕ್ಕದ್ದು ನಾ ನೋಡಿಯೇ ಇಲ್ಲ
ನಿಮಗೂ ಸಿಗಬಹುದು ಇವನು
ಮಸಿ ಪೆನ್ನಲ್ಲಿ ಸಾರಿ ಹೋದವನು
ಸಹಿ ಹಾಕಿ ಸುಸ್ತಾದವನು
ಮೆದುಳು ಭಾರವಾಗಿ
ನಿದ್ದೆ ಹೋದವನು

ಬೆಳಗ್ಗೆ ಇಡ್ಲಿ
ಬಟ್ಟಲು ತುಂಬ ಗುಳಿಗಿ
ಶುಗರ್‌ಲೆಸ್ ಕಾಫಿ
ಗ್ಯಾಸ್ಟ್ರಿಕ್ ದೇವರಿಗೆ ನಮೋ ನಮೋ
ಸಭೆಯಲ್ಲಿ ಕೂತಿದ್ದಾನೆ ದೇವರು
ಕಡು ಬೇಸಿಗೆಯಲ್ಲಿಯೂ ಕೋಟು
ಕಾಲಿಗೆ ಇಳಿಬಿದ್ದಿವೆ ಬೂಟು
ಮೂಗಿನ ಕೆಳಗೆ ಟೈ ಕಣ್ಕಟ್ಟು
ಒಂದೂ ನಿಸೂರಾಗದೇ
ಜಾರಿ ಹೋಗಿದೆ ಬದುಕು
ಲೋಕ ಮರೆತವನ ಕೋಣೆಯಲಿ
ಒಬ್ಬಂಟಿ ನೆರಳು

ಓಣಿಯವರು
ಊರಿನವರು
ತಟ್ಟಿದ್ದೆ ತಟ್ಟಿದ್ದು ಚಪ್ಪಾಳೆ
ಈ ಕೋಟಿಗೆ
ಖಾಲಿ ತಿರುಗುವ ಫ್ಯಾನಿಗೆ
ನನ್ನ ಮಗನೂ ಪಾಸು ಮಾಡಿದ್ದಾನೆ
ಇಂಥ ಭಯಂಕರ
ಹಸಿರು ಪೆನ್ನಿನ ಪರೀಕ್ಷೆ

ಈಗ ತಾನೆ ಹೋದ
ಕೋಟು ಹೊಲಿಸಲು
ದರ್ಜಿ ಅಂಗಡಿಗೆ
ತಿರುಗಿ ಬಾರದ ಊರು
ಇಂಗಿ ಹೋದ ಬೆವರು
ಜನಗಳಿಲ್ಲದ ಬೀದಿ
ಅನಾಥ ನಿಶಾನೆ ಹಿಡಿದು
ಚಲಿಸುತ್ತಲೇ ಇದೆ
ಬ್ರಿಟಿಷರು ಬಿಟ್ಟು ಹೋದ ತೇರು

**– ಬಸವರಾಜ ಹೂಗಾರ**

# ಕವಿಗಳ ವಿಳಾಸಗಳು

1. ನಟರಾಜ್ ಬೂದಾಳ್
   ಗೌರಿ ಸಪ್ತಗಿರಿ ಬಡಾವಣೆ
   ನಳಂದ ಶಾಲೆ ಹಿಂಭಾಗ
   ತುಮಕೂರು – 572102

2. ಪ್ರೊ. ಎಸ್.ಜಿ. ಸಿದ್ಧರಾಮಯ್ಯ
   'ಅಸೀಮ' ನಂ.6, ಕಾರ್ಪರೇಷನ್
   ಬ್ಯಾಂಕ್ ಹತ್ತಿರ
   ಜಯರಾಮ ಲೇಔಟ್, ಜಕ್ಕೂರು
   ಬೆಂಗಳೂರು–560064

3. ಸ. ರಘುನಾಥ
   ಕಂಟ್ರಾಕ್ಟರ್ ರಾಜಣ್ಣನವರ ಮನೆ
   ವೇಣು ವಿದ್ಯಾಸಂಸ್ಥೆ ಎದುರು
   ಶ್ರೀನಿವಾಸಪುರ, ಕೋಲಾರ ಜಿಲ್ಲೆ

4. ಲಕ್ಷ್ಮೀಪತಿ ಕೋಲಾರ
   ನಂ. 14, 1ನೇ ಹಂತ
   3ನೇ ಮುಖ್ಯರಸ್ತೆ, ಬೆಮೆಲ್ ಲೇಔಟ್
   ಬಸವೇಶ್ವರನಗರ
   ಬೆಂಗಳೂರು – 560078

5. ಡಾ. ಕೆ. ಷರೀಫಾ
   ನಂ.4, 4ನೇ ಕ್ರಾಸ್, ರಹಮತ್
   ನಗರ, ಬೆಂಗಳೂರು – 32

6. ಹುರುಕಡ್ಲಿ ಶಿವಕುಮಾರ್
   ಬಾಚಿಗೊಂಡನಹಳ್ಳಿ (ಅಂಚೆ)
   ಹಗರಿಬೊಮ್ಮನಹಳ್ಳಿ ತಾಲ್ಲೂಕು

7. ಹಣಮಂತ ತಾಶಗಾಂವಕಾರ
   'ಸುಧನ್ವ' ಸೆಕ್ಟರ್ ನಂಬರ್ 18/25
   ನವನಗರ, ಬಾಗಲಕೋಟೆ–587103

8. ಡಾ. ವಿರೂಪಾಕ್ಷ ಕೆ. ಬಣಕಾರ್
   ವಿಜ್ಞಾನಿ, ರಾಷ್ಟ್ರೀಯ ಸಾಗರ ವಿದ್ಯಾ
   ಸಂಸ್ಥೆ, ಡೋನಾ–ಪಾಲ್
   ಗೋವಾ–403004

9. ರೂಪ ಹಾಸನ
   'ಪ್ರೇರಣಾ' ಸೆಂಟ್ ಜೋಸೆಫ್
   ಕಾಲೇಜು ರಸ್ತೆ, ಉತ್ತರ ಬಡಾವಣೆ
   ಹಾಸನ–573201

10. ರವಿಶಂಕರ ಒಡ್ಡಂಬೆಟ್ಟು
    ಉಪನ್ಯಾಸಕ, ಸರ್ಕಾರಿ ಪದವಿಪೂರ್ವ
    ಕಾಲೇಜು, ಕಾವೂರು, ಮಂಗಳೂರು–15

11. ಸಂತೋಷ ಅಂಗಡಿ
    ಲಕ್ಷ್ಮೀ ನಗರ, ಬಾದಾಮಿ
    587201, ಬಾಗಲಕೋಟೆ ಜಿಲ್ಲೆ

12. ಆರ್. ತಾರಿಣಿ ಶುಭದಾಯಿನಿ
    'ಸದಾಸಿರಿ' 34/1 ಫಿಲ್ಟರ್ ಹೌಸ್ ರಸ್ತೆ
    ಚಿತ್ರದುರ್ಗ–577501

13. ಡಾ. ಎಚ್. ಎಸ್. ಅನುಪಮಾ
    ಕವಲಕ್ಕಿ 581361
    ಹೊನ್ನಾವರ ತಾಲೂಕು
    ಉತ್ತರ ಕನ್ನಡ ಜಿಲ್ಲೆ

14. ಸತ್ಯಾನಂದ ಪಾತ್ರೋಟ
ಜಾಜಿಮಲ್ಲಿಗೆ
ಸೆಕ್ಟರ್ ನಂ. 42, ನವನಗರ
ಬಾಗಲಕೋಟೆ ಜಿಲ್ಲೆ

15. ಶೂದ್ರ ಶ್ರೀನಿವಾಸ
573, ಕೋಟೆ ಮನೆ
17ನೇ ಕ್ರಾಸ್, ಇಸ್ರೋ ಬಡಾವಣೆ
ಇಸ್ರೋ ಅಂಚೆ
ಬೆಂಗಳೂರು–78

16. ಚಂದ್ರಕಾಂತ ಕುಸನೂರ
# 534, ರಾಣಿ ಚೆನ್ನಮ್ಮಾ ನಗರ
2ನೇ ಹಂತ, ಬೆಳಗಾವಿ

17. ಸವಿತಾ ನಾಗಭೂಷಣ
ಎಚ್ಐಜಿ–ನುಡಿ
ಕಲ್ಲಳ್ಳಿ ಬಡಾವಣೆ
ವಿನೋಬಾ ನಗರ
ಶಿವಮೊಗ್ಗ

18. ಎಚ್. ಎನ್. ಆರತಿ
ಕಾರ್ಯಕ್ರಮ ಸಂಯೋಜಕರು
ದೂರದರ್ಶನ ಕೇಂದ್ರ
ಜೆ.ಸಿ. ನಗರ, ಬೆಂಗಳೂರು

19. ನಾಗರಾಜ್ ವಸ್ತಾರೆ
ಪ್ರಗೂಪ್ ಅಮೂರ್ತ್‌ಸ್ಥಿತಿ
ಆರ್ಕಿಟೆಕ್ಸ್ಟ್ 712, ವಸ್ತಾರೆ 14ನೇ
ಮುಖ್ಯರಸ್ತೆ, 20ನೇ ತಿರುವು,
ಬನಶಂಕರಿ 2ನೇ ಹಂತ
ಬೆಂಗಳೂರು–560070

20. ಅನಿತಾ ಹುಳಿಯಾರ್
573/2, 1ನೇ ಮುಖ್ಯರಸ್ತೆ
2ನೇ ಮುಖ್ಯರಸ್ತೆ
ಬಿಇಎಂಎಲ್ ಬಡಾವಣೆ
3ನೇ ಹಂತ, ರಾಜರಾಜೇಶ್ವರೀ ನಗರ
ಬೆಂಗಳೂರು–560098

21. ಎನ್. ರಸ್. ನಾಗಭೂಷಣ
ಬಿನ್ ಕುಶಲ ಕುಮಾರ್, ಟಗರಪುರ
ಗ್ರಾಮ, ಚಿಲಕವಾಡಿ ಅಂಚೆ
ಕೊಳ್ಳೇಗಾಲ ತಾಲ್ಲೂಕು
ಚಾಮರಾಜನಗರ ಜಿಲ್ಲೆ

22. ಹರವು ಸ್ಫೂರ್ತಿಗೌಡ
ಹರವು ಗ್ರಾಮ ಪಾಂಡವಪುರ
ತಾಲ್ಲೂಕು ಮಂಡ್ಯ ಜಿಲ್ಲೆ

23. ಸುಬ್ಬು ಹೊಲೆಯಾರ್
ನಂ. 8, ಶ್ರೀ ಭಗವತಿ, 8ನೇ ತಿರುವು
ರೈಲ್ವೆ ಸ್ಟೇಷನ್, ಹೊಸ ಬಡಾವಣೆ
ಕೆ.ಎಚ್.ಬಿ. ರಸ್ತೆ, ಕಾವಲ್‌ಭೈರಸಂದ್ರ
ಆರ್.ಟಿ. ನಗರ, ಬೆಂ–560032

24. ಎಸ್. ಮಾಲತಿ, ಮಹಾಲಸ ನಿಲಯ
ಜೋಗ ರಸ್ತೆ, ಸಾಗರ
ಶಿವಮೊಗ್ಗ ಜಿಲ್ಲೆ–577401

25. ಶಿ. ಜಿ. ಪಾಶ, ಪತ್ರಕರ್ತರು
3ನೇ ತಿರುವು, ಕೆರೆ ಅಂಗಳ
ಮಿಲಘಟ್ಟ, ಶಿವಮೊಗ್ಗ–577201

26. ಆರ್. ಜ್ಯೋತಿ ಗುರುಪ್ರಸಾದ್
ಕಾವೇರಿ, ಟೆಲ್ಲಾರ್ ರಸ್ತೆ, 16ನೇ
ತಿರುವು, ಕಾರ್ಕಳ–574104

27. ಕೆ. ಪಿ. ಮೃತ್ಯುಂಜಯ
ಕನ್ನಡ ಉಪನ್ಯಾಸಕರು
ಮಹಿಳಾ ಸರ್ಕಾರಿ ಪದವಿಪೂರ್ವ
ಕಾಲೇಜು, ಅರ್ಕೇಶ್ವರ ನಗರ
ಮಂಡ್ಯ–571403

28. ವಸಂತ ಬನ್ನಾಡಿ
ಜೆಎಲ್‌ಬಿ ರಸ್ತೆ, ವಿಠಲವಾಡಿ
ವಡೇರ ಹೋಬಳಿ, ಕುಂದಾಪುರ
576201

29. ಆರೀಫ್ ರಾಜಾ
ಅರಿಕೆರಾ–584111
ದಿಯಾದುರ್ಗ ತಾಲೂಕು
ರಾಯಚೂರು ಜಿಲ್ಲೆ

30. ವಿಷ್ಣು ನಾಯಕ
ಪರಿಮಳ, ಅಂಬಾರಕೊಡ್ಲು
ಅಂಕೋಲಾ–581314
ಉತ್ತರ ಕನ್ನಡ ಜಿಲ್ಲೆ

31. ಎಸ್. ಮಂಜುನಾಥ್
ಸುಕೃತ ಕ್ಲಬ್ ಎದುರು
ಎಸ್.ಜೆ.ಜಿ. ರಸ್ತೆ, ಕೆ.ಆರ್. ನಗರ
571602, ಮೈಸೂರು ಜಿಲ್ಲೆ

32. ಆಶಾದೇವಿ ಎಂ. ಎಸ್.
5/41 ಸಮೀರ ಕೃಪ
1ನೇ ಮೈನ್ 1ನೇ ಸ್ಟೇಜ್
ಕೆಎಚ್‌ಬಿ ಕಾಲೋನಿ
ಬಸವೇಶ್ವರ ನಗರ, ಬೆಂ.–79

33. ವಿವೇಕ ಶಾನಭಾಗ
ವಿಕ್ಟೋರಿಯನ್ ವಿಲ್ಲಾ
ಅಲೆಕ್ಸಾಂಡ್ರಾ ರಸ್ತೆ
ರಿಚ್‌ಮಂಡ್ ಟೌನ್
ಬೆಂಗಳೂರು–25

34. ಲಕ್ಕೂರು ಆನಂದ
ಕನ್ನಡ ಉಪನ್ಯಾಸಕರು
ಶೇಷಾದ್ರಿಪುರಂ ಪದವಿ ಕಾಲೇಜು
ಶೇಷಾದ್ರಿಪುರಂ, ಬೆಂಗಳೂರು

35. ಕೆ. ವಿ. ಅಕ್ಷರ
ನೀನಾಸಂ, ಹೆಗ್ಗೋಡು
ಸಾಗರ ತಾಲೂಕು
ಶಿವಮೊಗ್ಗ ಜಿಲ್ಲೆ

36. ಜಯಂತ ಕಾಯ್ಕಿಣಿ
ಇ–204, ಆದರ್ಶ ಹಿಲ್
ಅಪಾರ್ಟ್‌ಮೆಂಟ್ಸ್ ದಯಾನಂದ
ಕಾಲೇಜು ಎದುರು, ಕುಮಾರಸ್ವಾಮಿ
ಲೇಔಟ್ ಬೆಂ.560078

37. ಬಸವರಾಜ ಹೂಗಾರ
ಸಹಾಯಕ ನಿರ್ದೇಶಖರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕಾರವಾರ

38. ಡಾ. ಎಚ್.ಎಸ್. ರಾಘವೇಂದ್ರ ರಾವ್
'ಶ್ರೀಮಾತಾ' ಜೆ.ಪಿ. ನಗರ 7ನೇ ಹಂತ
ಬೆಂಗಳೂರು

## 2012ನೇ ಸಾಲಿನಲ್ಲಿ ಸಂಗ್ರಹಿಸಿರುವ ಪದ್ಯಗಳು

1. ಇದೆಂತಹ ಗಡಿಗಳು – ಡಾ. ಕೆ. ಷರೀಫಾ
2. ಜಾಖಾಲು ಕುದುರೆ – ಹುರುಕಡ್ಲಿ ಶಿವಕುಮರ
3. ನೆಲಾ ನುಂಗಿದ ಮ್ಯಾಲ – ಹಣಮಂತ ತಾಸಗಾಂವಕರ
4. ಕಾರ್ಬನ್ ಕಾರ್ಬನ್ – ಡಾ. ವಿರೂಪಾಕ್ಷ ಕೆ. ಬಣಕಾರ
5. ಕವಡೆ ಕನ್ಯೆಯ ಮಹಾಕೂಟ – ಲಕ್ಷ್ಮೀಪತಿ ಕೋಲಾರ
6. ಮಹಾ ಪರಿನಿರ್ವಾಣ – ರೂಪ ಹಾಸನ
7. ಕಡಲು ಕವಿತೆ – ರವಿ ಶಂಕರ ಒಡ್ಡಂಬೆಟ್ಟು
8. 'ಕಾಲ–ಪ್ರಕ್ರಿಯೆ' – ಸಂತೋಷ ಅಂಗಡಿ
9. ಸತ್ಯದ ಪಣ ತೊಟ್ಟು – ನಾಗರಾಜ ವಸ್ತಾರೆ
10. ಬರೆಯುವಾಗ – ಆರ್. ತಾರಿಣಿ ಶುಭದಾಯನಿ
11. ಕೆಲವು ಪದ್ಯಗಳು – ಕೆ.ಪಿ. ಮೃತ್ಯುಂಜಯ
12. ಖಬರಸ್ಥಾನ – ಶಿ. ಜು. ಪಾಶ
13. ಪುವ್ವಿ – ಆರೀಫ್ ರಾಜಾ
14. ಯುಗನದ್ಧ – ಎಸ್. ನಟರಾಜ ಬೂದಾಳು
15. ಎರಡು ಗಜಲ್‌ಗಳು – ಶೂದ್ರ ಶ್ರೀನಿವಾಸ್
16. ಕೋಬನ್‌ಗಳು – ಚಂದ್ರಕಾಂತ ಕುಸನೂರ
17. ಹೀಗೊಂದು ಬೆಳಗು – ಸತ್ಯಾನಂದ ಪಾತ್ರೋಟ
18. ಅವಗುಣ – ಎಸ್. ಜಿ. ಸಿದ್ಧರಾಮಯ್ಯ
19. ಮುಗಿಲಿನೊಡನೆ ಮಾತುಕತೆ – ಕೆ.ವಿ. ಅಕ್ಷರ
20. ದೇಹ ಸಂಬಂಧ – ವಿವೇಕ ಶಾನಭಾಗ
21. ಚಿತ್ತಬುತ್ತಿಯ ಬಿಚ್ಚು – ಸ. ರಘುನಾಥ

22. ಅರ್ಧ ಕಿಲೊ ಸಮುದ್ರ – ಜಯಂತ ಕಾಯ್ಕಿಣಿ

23. ಬೇರು ಬಿತ್ತವಾಗು ಪರಿ – ಡಾ. ಎಚ್. ಎಸ್. ಅನುಪಮಾ

24. ಧಂ ಧಮಾಕಾ ಸೇಲ್ – ಸವಿತಾ ನಾಗಭೂಷಣ

25. ಡಾಲಿ–ಅಕ್ಕಮಹಾದೇವಿಯ ಯುಗಳಗೀತೆ – ಅನಿತಾ ಹುಳಿಯಾರ್

26. ಭೂಮಿ ನಗುತಲಿದೆ – ಎಚ್. ಎಸ್. ರಾಘವೇಂದ್ರ ರಾವ್

27. ಸೌಂದರ್ಯದ ಶಿಲ್ಪ – ಜ್ಯೋತಿ ಗುರುಪ್ರಸಾದ್

28. ಕನಸುಗಳ ಬಿತ್ತಿರಿ – ಎಸ್. ಮಾಲತಿ

29. ನಿನ್ನ ಬೆತ್ತಲೆಗೆ ನನ್ನ ದಿರಿಸು – ವಸಂತ ಬನ್ನಾಡಿ

30. ಅಭಯ – ಎಂ. ಎಸ್. ಆಶಾದೇವಿ

## 2013ನೇ ಸಾಲಿನಲ್ಲಿ ಸಂಗ್ರಹಿಸಿರುವ ಪದ್ಯಗಳು

1. ಹಿಡಿಮಣ್ಣನ್ನು ಕನವರಿಸುತ್ತಿದ್ದೇನೆ – ಲಕ್ಕೂರು ಆನಂದ

2. ಕಾಯ್ತಾ ಇದ್ದೀನಿ ಎಷ್ಟೊತ್ತಿಗೆ ಕತ್ಲೆ ಆಗುತ್ತೆ ಅಂತ – ಸುಬ್ಬು ಹೊಲೆಯಾರ್

3. ನವಿಲ ತತ್ತಿಯೊಳಗಿತ್ತೇ ಈಸೊಂದು ಕತ್ತಲು – ಲಕ್ಷ್ಮೀಪತಿ, ಕೋಲಾರ

4. ನಮ್ಮ ರಸ್ತೆ ಅಗಲವಾಗಿ – ಎಸ್. ಮಂಜುನಾಥ್

5. ಮಾನವ ಕದ್ದ ಮುಗ್ಧಗೆ –ಎಚ್.ಎನ್. ಆರತಿ

6. ಪ್ರಳಯ ಬಂತೆ? – ವಿಷ್ಣು ನಾಯ್ಕ

7. ಈಜಬೇಕು ನೀಳ ಬೆನ್ನಲ್ಲಿ – ಹರವು ಸ್ಫೂರ್ತಿಗೌಡ

8. ಸಹೃದಯರ ಸಹಜ ಕೃತಿ ಪರೀಕ್ಷೆ – ಡಾ. ನಟರಾಜ ಹುಳಿಯಾರ್

9. ಅಧಿಕಾರಿ –ಬಸವರಾಜ ಹೂಗಾರ